# ಶ್!

## ಹರಟೆ ಬೇಡ



ಉಚಿತವಾದ ಹಂಚಿಕೆಗಾಗಿ ಮಾತ್ರ
ಮುದ್ರಣ  ಮತ್ತು ಹಂಚಿಕೆ : **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ : ಡಿಜಿಟಲ್ ಬಿಡುಗಡೆ ಜುಲೈ 2020

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬ್ರೈಫೈಯ್ಥ್ ಡಿಸೈನ್ಸ್

Contact Information:
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: bookrequest@apcwo.org
Website: apcwo.org

Unless otherwise indicated, all Scripture quotations are taken from the Holy Bible, New King James Version. Copyright © 1982 by Thomas Nelson, Inc., Used by permission. All rights reserved.

Scriptures marked as "(MSG)" are taken from THE MESSAGE: The Bible in Contemporary Language copyright 2002 by Eugene H. Peterson.

Scriptures marked as "(GNB)" are taken from the GNB – Second Edition © 1992 by American Bible Society. Used by permission.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

**ಮೇಲಿಂಗ್ ಪಟ್ಟಿ ಮತ್ತು ಉಚಿತ ಹೆಚ್ಚುವರಿ ಪುಸ್ತಕಗಳಿಗಾಗಿ**

ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ನಾವು ನಿಮ್ಮ ಸಭೆಯಲ್ಲಿ, ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿರಿ. ನಾವು ಅವುಗಳನ್ನು ನಿಮಗೆ ಕಳುಹಿಸುತ್ತೇವೆ.

(Kannada Book - Shhh! No Gossip)

# ಶ್!

**ಹರಟೆ ಬೇಡ!**

# ಪರಿವಿಡಿ


1: ಹರಟೆ 1

ಹರಟೆ ಅಂದರೇನು 2

ಏನನ್ನು ಹರಟೆ (ವದಂತಿ) ಎಂಬುದಾಗಿ ಪರಿಗಣಿಸುವುದಿಲ್ಲ 4

2: ಹರಟೆ ಜರುಗುವ ಸಾಮಾನ್ಯ ಸಂದರ್ಭಗಳು 8

ಸಮುದಾಯ ಹರಟೆ ಮಾತು/ವದಂತಿ 8

ಕೆಲಸದ ಸ್ಥಳದ ಹರಟೆ ಮಾತು 13

ಸಾಮಾಜಿಕ ಮಾಧ್ಯಮದ ಹರಟೆ 14

3: ಹರಟೆ ಮಾತಿನ ನಕಾರಾತ್ಮಕ ಪರಿಣಾಮಗಳು 15

ಹರಟೆಯು ಅನುತ್ಪಾದಕ ಮತ್ತು ಸಮಯ ವ್ಯರ್ಥ ಮಾಡುವಂತದ್ದು 15

ಹರಟೆಯು, ಒಬ್ಬ ವ್ಯಕ್ತಿಯ ಗೌರವ ನಾಶವಾಗುವುದರಿಂದ ನಂಬಿಕೆ ಕಳೆದುಕೊಳ್ಳುತ್ತದೆ ಮತ್ತು ಗುಣ ನಡತೆಯು ನಾಶವಾಗುತ್ತದೆ 16

ಹರಟೆಯು ಜನರ ಭಾವನೆಗಳಿಗೆ ಹಾನಿ ಮಾಡುತ್ತದೆ 17

ಹರಟೆಯು ಸಂಬಂಧಗಳನ್ನು ನಾಶಮಾಡುತ್ತದೆ 18

4: ಹರಟೆಯ ವಿರುದ್ಧ ದೇವರ ಗಂಭೀರ ನಿಲುವು 20

5: ಹರಟೆಯನ್ನು ನೀವು ಹೇಗೆ ನಿರ್ವಹಿಸುತ್ತೀರಿ? 23

ಹರಟೆಯ ಮೇಲೇರಿ ಎದ್ದೇಳುವುದು 23

ಸಾಧ್ಯವಾದರೆ, ಪ್ರೀತಿಯಿಂದ ಎದುರಿಸಿರಿ 25

ಇದು ಸಾಯಲಿ 25

ಪ್ರಾರ್ಥಿಸಿರಿ, ಕ್ಷಮಿಸಿರಿ ಮತ್ತು ಬಿಡುಗಡೆಗೊಳಿಸಿರಿ 25

6: ಪ್ರಾರ್ಥನೆ 28

ಪಶ್ಚಾತ್ತಾಪ ಮತ್ತು ಅರಿಕೆಯ ಪ್ರಾರ್ಥನೆ 28

ಹಳೆಗಾಲದಲ್ಲಿ ಹರಟೆಯಿಂದ ಗಾಯಗೊಂಡಿರುವಂತವರಿಗಾಗಿ ಪ್ರಾರ್ಥನೆ 28

ಹರಟೆಯು ಜರುಗುತ್ತಿರುವಂತಹದರ ಮಧ್ಯದಲ್ಲಿರುವಂತವರಿಗಾಗಿ ಪ್ರಾರ್ಥನೆ 29

# 1

# ಹರಟೆ

ಸತ್ಯವೇದದಲ್ಲಿ ದಾವೀದನು ಕೀರ್ತನೆಯಲ್ಲಿ ದೇವರೊಂದಿಗೆ ಸಂಪರ್ಕಿಸುವ, ಆತನ ಪ್ರಸನ್ನತೆಯಲ್ಲಿ ವಾಸಿಸುವ ಮತ್ತು ಆತನನ್ನು ಆರಾಧಿಸುವ ವ್ಯಕ್ತಿಯು ಯಾರಾಗಿರಬೇಕೆಂಬುದಾಗಿ ವ್ಯಾಖ್ಯಾನಿಸುತ್ತಾನೆ.

ಕೀರ್ತನೆಗಳು 15:1-5

**ಯೆಹೋವನೇ, ನಿನ್ನ ಗುಡಾರದಲ್ಲಿ ಇಳು ಕೊಂಡಿರುವುದಕ್ಕೆ ಯೋಗ್ಯನು ಯಾವನು? ನಿನ್ನ ಪರಿಶುದ್ಧ ಪರ್ವತದಲ್ಲಿ ವಾಸಿಸತಕ್ಕವನು ಎಂಥವನಾಗಿರಬೇಕು? ಅವನು ಸಜ್ಜನನೂ ನೀತಿವಂತನೂ ಮನಃ ಪೂರ್ವಕವಾಗಿ ಸತ್ಯವಚನವನ್ನಾಡುವವನೂ ಆಗಿರಬೇಕು. ಅವನು ಚಾಡಿಯನ್ನು ಹೇಳದವನೂ ಮತ್ತೊಬ್ಬರಿಗೆ ಅನ್ಯಾಯ ಮಾಡದವನೂ ಯಾರನ್ನೂ ನಿಂದಿಸದವನೂ ಆಗಿರಬೇಕು ಅವನು ಭ್ರಷ್ಟರನ್ನು ಜರಿದು ಬಿಟ್ಟವನೂ ಯೆಹೋವನಲ್ಲಿ ಭಯಭಕ್ತಿಯುಳ್ಳವರನ್ನು ಸನ್ಮಾನಿಸುವವನೂ ನಷ್ಟವಾದರೂ ಪ್ರಮಾಣ ತಪ್ಪದವನೂ ಆಗಿರಬೇಕು ಅವನು ಸಾಲಕ್ಕೆ ಬಡ್ಡಿ ಕೇಳದವನೂ ನಿರಪರಾಧಿಯ ಕೇಡಿಗಾಗ ಲಂಚತೆಗೆದುಕೊಳ್ಳದವನೂ ಆಗಿರಬೇಕು ಇಂಥವನು ಎಂದಿಗೂ ಕದಲುವುದಿಲ್ಲ.**

ಅಂತಹ ವ್ಯಕ್ತಿಯು ಅನೇಕ ಗುಣಲಕ್ಷಣಗಳು ಈ ಒಂದು ಕೀರ್ತನೆಯಲ್ಲಿ ಮುಖ್ಯಾಂಶಗಳಾಗಿವೆ. ನಾವು ಮೂರನೇ ವಚನವನ್ನು ದೃಷ್ಟಿಸೋಣ.

**ಕೀರ್ತನೆಗಳು 15:30 (ನ್ಯೂ ಲೀವಿಂಗ ಟ್ರಾನ್ಸಲೇಷನ್) ವದಂತಿಗಳನ್ನು ಹಬ್ಬಿಸದವನೂ ಅಥವಾ ತನ್ನ ನೆರೆಯವನಿಗೆ ಹಾನಿ ಮಾಡದವನೂ ಅಥವಾ ಅವರ ಸ್ನೇಹಿತರುಗಳ ಕುರಿತು ಕೆಟ್ಟದಾಗಿ ಮಾತಾಡದವನೂ.**

ವದಂತಿ ಹಿಂದೆ ದೂರುವುದು ಇತರರ ಬಗ್ಗೆ ಕೆಟ್ಟದಾಗಿ ಮಾತಾಡುವುದು ಇಂತಹ ಪಾಪಗಳಲ್ಲಿ ಒಂದಾಗಿರುವಂತವುಗಳನ್ನು ನಾವು ಬಹಳ ಲಘುವಾಗಿ ತೆಗೆದುಕೊಳ್ಳುತ್ತೇವೆ. ಆದರೆ ಇವು ದೇವರೊಂದಿಗಿನ ನಮ್ಮ ಸಂಬಂಧವನ್ನು ಹಾಳು ಮಾಡುತ್ತವೆ. ಇಂತಹ ಪಾಪಗಳು ಆತನ ಪ್ರಸನ್ನತೆಯನ್ನು ನಾವು ಅನುಭವಿಸುವುದು, ದೇವರ ಆರಾಧನೆ ಮತ್ತು ನಮ್ಮ ಅನ್ಯೋನ್ಯತೆಗೆ ಅಡ್ಡಿಯನ್ನುಂಟು ಮಾಡುತ್ತದೆ.

## ಹರಟೆ ಎಂದರೇನು

ವದಂತಿ (ಹರಟೆಗೆ) ಶಬ್ದಕೋಶದ ವಿವರಣೆಯು ''ಆಕಸ್ಮಿಕ ಅಥವಾ ಅನಿಯಂತ್ರಿತ ಸಂಭಾಷಣೆ ಅಥವಾ ಇತರ ಜನರ ಬಗ್ಗೆ ವರದಿಗಳಾಗಿದೆ, ವಿಶಿಷ್ಟವಾಗಿ ಸತ್ಯವೆಂದು ದೃಢಪಡಿಸದಂತಹ ವಿವರಗಳನ್ನು ಇದು ಒಳಗೊಂಡಿದೆ.'' (ಆಕ್ಸ್‌ಫರ್ಡ್ ಅಡ್ವಾನ್ಸ್ ಲರ್ನರ್ಸ್ ಡಿಕ್ಸನರಿ) ವಿಶಿಷ್ಟವಾಗಿ ಹರಟೆಯು ಗೊಣಗು ಮಾತು ಅಥವಾ ವದಂತಿಯಾಗಿದೆ, ವಿಶೇಷವಾಗಿ ವೈಯಕ್ತಿಕ ಅಥವಾ ಇತರರ ಖಾಸಗಿ ವ್ಯವಹಾರಗಳು ಕುರಿತುದಾಗಿದೆ. ಇದು ಜನರ ಬಗ್ಗೆ ತಪ್ಪು ಮಾಹಿತಿಯನ್ನು ಹಬ್ಬಿಸುವುದಾಗಿದೆ.

ಈ ಪುಸ್ತಕದಲ್ಲಿ, ಮುಂದಿನವುಗಳನ್ನು ಅದಲು ಬದಲಾಗಿ ನಾವು ಉಪಯೋಗಿಸುತ್ತೇವೆ: ಹರಟೆ, ಹಿಂದೆ ದೂರುವುದು, ಅಪನಿಂದೆ, ಹಿಂದೆ ತಿವಿಯುವುದು, ಚಾಡಿಹೇಳುವುದು, ಕಟ್ಟು ಕಥೆ ಹೇಳುವುದು, ಪ್ರತಿಯೊಂದು ಅರ್ಥಗಳ ನಡುವೆ ಕೆಲವು ಉತ್ತಮವಾದ ವ್ಯತ್ಯಾಸಗಳಿವೆ. ಎನ್.ಕೆ.ಜೆ.ವಿ ಎಂಬ ಆಂಗ್ಲ ಭಾಷೆಯ ಸತ್ಯವೇದವು ಹರಟೆಹೊಡೆಯುವರು, ಹಿಂದೆ ನಿಂದಿಸುವವರು, ಅಪನಿಂದೆ ಮಾಡುವವರಿಗೆ 'ಕಟ್ಟುಕಥೆಕಟ್ಟುವವರು' ಎಂಬ ಪದ ಉಪಯೋಗಿಸಿದೆ. ನಮ್ಮ ತಿಳುವಳಿಕೆಗಾಗಿ ಇದರಲ್ಲಿ ಕೆಲವು ಪದಗಳನ್ನು ಸಂಕ್ಷಿಪ್ತವಾಗಿ ವಿವರಿಸೋಣ, ಅವುಗಳನ್ನು ಅದಲು ಬದಲು ಮಾಡಿ ಉಪಯೋಗಿಸಿದ್ದೇವೆ.

***ಹಿಂದೆ ದೂರುವುದು*** - ಹಾಜರಿಲ್ಲದವರ ಬಗ್ಗೆ ದುರುದ್ದೇಶಪೂರಿತವಾಗಿ ಮಾತಾನಾಡುವುದು ರಕ್ಷಣೆಗೆ ಅವಕಾಶ ಕೊಡದೆ ಯಾರೋ ಒಬ್ಬರ ಗೌರವಕ್ಕೆ ಹಾನಿಯನ್ನುಂಟು ಮಾಡುವುದು. ಇದು ಆ ಪದವನ್ನು ಚಿತ್ರಿಸುತ್ತದೆ, ಅವರ ಹಿಂದೆ ಅವರನ್ನು ದೂರುವುದಾಗಿದೆ.

***ಹಿಂದೆ ತಿವಿಯುವುದು*** - ಯಾರೋ ಒಬ್ಬರ ಜೊತೆ ಸ್ನೇಹಿತರಂತೆ ನಟಿಸುವ ಹೊರತಾಗಿಯೂ ಅವರ ಬಗ್ಗೆ ವಿಶ್ವಾಸ ಘಾತುಕ ರೀತಿಯಲ್ಲಿ ಟೀಕಿಸುವಂತಹ ಕ್ರಿಯೆ.

***ಅಪನಿಂದೆ*** - ಬೇರೊಬ್ಬರ ಕುರಿತು ತಪ್ಪಾದ, ನಕಾರಾತ್ಮಕ ದುರುದ್ದೇಶ ಪೂರಿತ ಮತ್ತು ಮಾನ ನಷ್ಟಕರವಾದ ಹೇಳಿಕೆಗಳನ್ನು ಮಾಡುವುದು.

***ಕಥೆಕಟ್ಟಿ ಹೇಳುವುದು (ಕಟ್ಟುಕಥೆ ಹೇಳುವವರು)*** - ಯಾರನ್ನಾದರೂ ತೊಂದರೆಯಲ್ಲಿ ಸಿಕ್ಕಿಸಬೇಕೆಂಬ ಉದ್ದೇಶದಿಂದ ಮತ್ತು ಆ ಒಂದು ತೊಂದರೆಯನ್ನು ಬಗೆಹರಿಸದೇ

ಅಧಿಕಾರದಲ್ಲಿರುವಂತಹವರಿಗೆ ಇತರರ ಬಗ್ಗೆ ತಪ್ಪು ವರದಿಗಳನ್ನು ನೀಡುವಂತಹವರು.

ಹಳೇ ಒಡಂಬಡಿಕೆಯಲ್ಲಿ, ಆತನ ಜನರ ಮಧ್ಯದಲ್ಲಿನ ಸಮುದಾಯದ ಜೀವಿತದ ಬಗ್ಗೆ ಸಲಹೆಗಳನ್ನು ಕೊಡುವಾಗ ದೇವರು ಈ ರೀತಿಯಾಗಿ ಉಲ್ಲೇಖಿಸಿದ್ದಾನೆ.

ವಿಮೋಚನಕಾಂಡ 23:1
**ಆಧಾರವಿಲ್ಲದ ಸುದ್ದಿಯನ್ನು ಹಬ್ಬಿಸಬಾರದು ದುಷ್ಟರ ಸಹಾಯಕ್ಕಾಗಿ ನ್ಯಾಯ ವಿರುದ್ಧವಾದ ಸಾಕ್ಷಿಯನ್ನು ನುಡಿಯಬಾರದು.**

ಯಾಜಕಕಾಂಡ 19:16
**ಪರಿಚಯವುಳ್ಳವರಲ್ಲಿ ಒಬ್ಬರ ಮೇಲೊಬ್ಬರು ಚಾಡಿಹೇಳಬಾರದು ಮತ್ತೊಬ್ಬನಿಗೆ ಮರಣ ಶಿಕ್ಷೆಯಾಗಲೇಬೇಕೆಂದು ಛಲ ಹಿಡಿಯಬಾರದು. ನಾನು ಯೆಹೋವನು**

ಯಾಜಕಕಾಂಡ 19:16 ಅ (ನ್ಯೂ ಲಿವಿಂಗ್ ಟ್ರಾನ್ಸ್‌ಲೇಷನ್)
**ನಿಮ್ಮ ಜನರುಗಳ ಮಧ್ಯದಲ್ಲಿ ಸುಳ್ಳುಸುದ್ದಿಯ ವದಂತಿಗಳನ್ನು ಹಬ್ಬಿಸದಿರು.**

ದುರದೃಷ್ಟಕರವಾಗಿ, ಸಾಕಷ್ಟು ಕೆಲವೇ ಜನರು ಸುಳ್ಳು ಸುದ್ದಿ ಅಥವಾ ವದಂತಿ ಹಬ್ಬಿಸುವುದರಲ್ಲಿ ಸಂತೋಷಪಡುತ್ತಾರೆ. ಆದ್ದರಿಂದ ಅದರಲ್ಲಿ ಪಾಲ್ಗೊಳ್ಳುತ್ತಾರೆ. ಕೆಲವು ಜನರಿಗೆ ಹರಟೆ ಅನ್ನುವುದು 'ರುಚಿಕರವಾದ ಊಟ' ಅವರು ಹರಟೆಯಲ್ಲಿ ತೊಡಗಿಸಿಕೊಳ್ಳುವುದನ್ನು ಮತ್ತು ಇತರರ ಬಗ್ಗೆ ಮಾತಾಡುವುದರಲ್ಲಿ ಆನಂದಿಸುತ್ತಾರೆ. ಒಂದು ಗಂಟೆ ಅಥವಾ ಇನ್ನೂ ಅಧಿಕವಾಗಿ ಹರಟೆಯಿಂದ ವದಂತಿಗಳನ್ನು ಹಬ್ಬಿಸಿದ ಮೇಲೆಯೇ ಅವರು ಪೂರ್ಣಗೊಂಡಿದ್ದಾರೆಂಬುದಾಗಿ ಭಾವಿಸುತ್ತಾರೆ. ವದಂತಿಗಳನ್ನು ಒಬ್ಬ ವ್ಯಕ್ತಿಯ ಹೃದಯಗಳಿಗೆ ಇಳಿಯುತ್ತವೆ. ಇದು ಒಂದು ಹಗುರವಾದ ಚರ್ಚೆ ಏನೂ ಇಲ್ಲ ಎಂಬುದಾಗಿ ನಾವು ಅಂದುಕೊಳ್ಳುತ್ತೇವೆ. ಆದರೆ ವದಂತಿಗಳನ್ನು ಹಬ್ಬಿಸಿದ್ದಂತಹವುಗಳು ಸಾಮಾನ್ಯವಾಗಿ ಜನರ ಮೇಲೆ ಪರಿಣಾಮ ಬೀರುತ್ತವೆ.

ಜ್ಞಾನೋಕ್ತಿಗಳು 18:8 (ಜ್ಞಾನೋಕ್ತಿಗಳು 26:22 ರೀತಿಯಲ್ಲಿ)
**ಚಾಡಿಕೋರನ ಮಾತುಗಳು ರುಚಿಯಾದ ತುತ್ತುಗಳು ಹೊಟ್ಟೆಯೊಳಕ್ಕೇ ಇಳಿಯುವವು.**

## ಏನನ್ನು ಹರಟೆ (ವದಂತಿ) ಎಂಬುದಾಗಿ ಪರಿಗಣಿಸುವುದಿಲ್ಲ

ಇತರರ ಕುರಿತು ಮಾತನಾಡುವಂತಹ ಸಮಯಗಳು ಇವೆ. ಅವರ ಸಾಮರ್ಥ್ಯ, ಬಲಹೀನತೆ ಮತ್ತು ಅವರ ವಿಫಲತೆಗಳ ನಿರ್ಣಯಿಕೆಗಳ ಕುರಿತು ಮಾತಾನಾಡಬಹುದು.

ಇದು ಒಳ್ಳೆಯ ಉದ್ದೇಶದಿಂದ ಮತ್ತು ದುರುದ್ದೇಶಪೂರಿತವಾಗಿಲ್ಲದಂತೆ ಇವುಗಳನ್ನು ಮಾಡುವಂತದ್ದು ವದಂತಿ ಎಂಬುದಾಗಿ ಪರಿಗಣಿಸಲ್ಪಡುವುದಿಲ್ಲ. ಕೆಲವು ಉದಾಹರಣೆಗಳನ್ನು ಪರಿಗಣಿಸೋಣ.

## *ಸಾಂದರ್ಭಿಕ ಚರ್ಚೆ/ಯಾರನ್ನಾದರೂ ಹಾಳು ಮಾಡದೆ ಮಾಹಿತಿಯನ್ನು ಹಂಚಿಕೊಳ್ಳುವುದು.*

ಉದಾಹರಣೆಗೆ, ನೀವು ಯಾರನ್ನಾದರೂ ಭೇಟಿ ಮಾಡಿದ ಅನುಭವದ ಬಗ್ಗೆ ನೀವು ಹಂಚಿಕೊಳ್ಳಬಹುದು, ನಿಮ್ಮ ಸಮಯ ಚೆನ್ನಾಗಿ ಅವರೊಡನೆ ಕಳೆದ್ದೀರಾ ಅಥವಾ ಇಲ್ಲವೋ, ಆ ಒಂದು ಭೇಟಿಯ ಫಲಿತಾಂಶವು ಸಕಾರಾತ್ಮಕವಾದುದ ಅಥವಾ ನಕಾರಾತ್ಮಕವಾದ ಮತ್ತು ಇತರೆ ಅದಕ್ಕೆ ಸಂಬಂಧಿಸಿದ ವಿಚಾರಗಳನ್ನು ಚರ್ಚಿಸುವುದು ಅಂತಹ ಸಂದರ್ಭಗಳಲ್ಲಿ ಯಾವುದೇ ವ್ಯಕ್ತಿಯನ್ನು ಹೀನೈಸುವ ಉದ್ದೇಶವಿಲ್ಲದೆ ನಿಮ್ಮ ಪ್ರಾಮಾಣಿಕ ಮೌಲ್ಯಮಾಪನವನ್ನು ನೀವು ಪ್ರಸ್ತುತ ಪಡಿಸುತ್ತೀರಿ.

## *ಇತರರು ಏನು ಹೇಳಿದರು ಅಥವಾ ಮಾಡಿದ್ದೇನು ಎಂಬುದರ ನಿರ್ದಿಷ್ಟ ಅನುಭವಗಳ ಕುರಿತು ಹಂಚಿಕೊಳ್ಳುವುದು.*

ತಿರುಗಿ, ನೀವು ವಿವರಗಳು ಹೇಳುತ್ತೀರಿ ಆದರೆ ತೊಡಗಿಸಿಕೊಂಡಂತಹ ಇತರ ಜನರುಗಳಿಗೆ ಹಾನಿ ಮಾಡಬಾರದೆಂಬ ಉದ್ದೇಶದೊಡನೆ ನೀವು ಇದನ್ನು ಮಾಡಿರಿ.

## *ಅನುಭವದ ಒಂದು ವೃತ್ತಿಪರ ಮೌಲ್ಯಮಾಪನ ಅಥವಾ ವೈಯಕ್ತಿಕ ಅಥವಾ ಪರಿಸ್ಥಿತಿಯ ಪರಿಮಾಣ ನಿರ್ಧರಿಸುವಿಕೆ*

ಕೆಲಸದ ಸ್ಥಳದ ಪರಿಸ್ಥಿತಿಗಳಲ್ಲಿ ನಿರಂತರವಾಗಿ ಇದು ಜರುಗುತ್ತದೆ. ಉದಾಹರಣೆಗೆ ಒಬ್ಬ ಅಭ್ಯರ್ಥಿಯ ಸಂದರ್ಶನದ ಕುರಿತು ನೀವು ವರದಿಸುವಾಗ, ಪ್ರದರ್ಶನದ ಅಂದಾಜುಗಳನ್ನು ಮಾಡುವುದು, ಒಂದು ಕಠಿಣ ಪರಿಸ್ಥಿತಿಯನ್ನು ಬಗೆಹರಿಸುವುದು ಮುಂತಾದವುಗಳು ಈ ಒಂದು ಸನ್ನಿವೇಶದಲ್ಲಿ, ನೀವು ಪ್ರಾಮಾಣಿಕವಾಗಿ ಸಾಮರ್ಥ್ಯಗಳು ಮತ್ತು ಬಲಹೀನತೆಗಳು, ಒಳ್ಳೆಯದು ಮತ್ತು ಕೆಟ್ಟದ್ದು ನಿಖರವಾದ ಚಿತ್ರಣವನ್ನು ಪ್ರಸ್ತುತಪಡಿಸುವ ಕ್ರಮದಲ್ಲಿ ಪ್ರಾಮಾಣಿಕವಾಗಿ ಚರ್ಚಿಸಬೇಕು.

## ವಿಚಾರಗಳು ಬಗೆಹರಿಸಲು ಪ್ರಯತ್ನಿಸುವುದು ಹುಡುಕುವುದು

ಕಲಹಗಳು ಅಥವಾ ತೊಂದರೆಗಳು ಇರುವಂತಹ ಪರಿಸ್ಥಿತಿಗಳಲ್ಲಿ ಗಂಭೀರವಾದ ಘಟನೆಗಳನ್ನು ನಾವು ವಿಮರ್ಶಿಸುತ್ತೇವೆ ಮತ್ತು ಒಂದು ಉತ್ತಮವಾದ ಮುಕ್ತಾಯಕ್ಕೆ ಬರಲು ವರ್ಗಾವಣೆಗೊಂಡ ವಿಷಯಗಳ ಕ್ರಮದಲ್ಲಿ ಬರಲು ಅಥವಾ ಕ್ರಿಯೆಯ ಮುಂದಿನ ಹೆಜ್ಜೆಯ ವಿಷಯದಲ್ಲಿ ತೀರ್ಮಾನಿಸುತ್ತೇವೆ. ದೇವರ ವಾಕ್ಯವು ನಮಗೆ ಮಾಡಲು ತಿಳಿಸಿರುವುದು ಇಲ್ಲಿದೆ: ''ಇದಲ್ಲದೆ ನಿನ್ನ ಸಹೋದರನು ತಪ್ಪು ಮಾಡಿದರೆ ನೀನು ಹೋಗಿ ನೀನೂ ಅವನು ಇಬ್ಬರೇ ಇರುವಾಗ ಅವನ ತಪ್ಪನ್ನು ಅವನಿಗೆ ತಿಳಿಸು. ಅವನು ನಿನ್ನ ಮಾತನ್ನು ಕೇಳಿದರೆ ನಿನ್ನ ಸಹೋದರನನ್ನು ಸಂಪಾದಿಸಿಕೊಂಡಿರುವೆ. ಅವನು ಕೇಳದೆ ಹೋದರೆ ಎರಡು ಮೂರು ಸಾಕ್ಷಿಗಳ ಬಾಯಿಂದ ಪ್ರತಿಯೊಂದು ಮಾತು ಸ್ಥಾಪನೆಯಾಗುವ ಹಾಗೆ ಇನ್ನೂ ಒಬ್ಬಿಬ್ಬರನ್ನು ನಿನ್ನ ಸಂಗಡ ಕರಕೊಂಡು ಹೋಗು ಅವನು ಅವರ ಮಾತನ್ನು ಕೇಳದೆ ಹೋದರೆ ಸಭೆಗೆ ಹೇಳು ಆದರೆ ಸಭೆಯ ಮಾತನ್ನೂ ಕೇಳದೆ ಹೋದರೆ ಅವನು ನಿನಗೆ ಅಜ್ಞಾನಿಯಂತೆಯೂ ಭ್ರಷ್ಟನಂತೆಯೂ ಇರಲಿ (ಮತ್ತಾಯ 18:15-17)

## ನೈತಿಕ ವೈಫಲ್ಯತೆ ಅಥವಾ ತಪ್ಪು ಮಾಡುವುದು ಇರುವಾಗ ವಿಚಾರಗಳನ್ನು ಪ್ರತಿನಿಧಿಸುವಾಗ

ಅಂತಹ ಪರಿಸ್ಥಿತಿಗಳಲ್ಲಿ, ನಾವು ಖಂಡಿತವಾಗಿ, ಅದರಲ್ಲಿ ತೊಡಗಿಸಿಕೊಂಡಿರುವಂತಹವರೆಲ್ಲರೊಂದಿಗೆ ವಿಚಾರಗಳನ್ನು ವ್ಯವಹರಿಸುವುದು ಅಗತ್ಯವಾಗಿದೆ, ಮಾಡಲ್ಪಟ್ಟಂತಹ ತಪ್ಪಿನ ಕುರಿತು ಮಾತಾನಾಡಿರಿ ಮತ್ತು ತಿದ್ದುಪಡಿ ಮತ್ತು ಪುನಃ ಸ್ಥಾಪನೆ ಕಡೆಗೆ ಕೆಲಸ ಮಾಡಿರಿ ಜರುಗಲ್ಪಟ್ಟಂತಹ ತಪ್ಪನ್ನು ನಾವು ಮುಚ್ಚಿಕೊಳ್ಳುವ ಪ್ರಯತ್ನ ಮಾಡುತ್ತಿಲ್ಲ ಆದರೆ ಗಲಾತ್ಯದವರಿಗೆ 6:1ರಲ್ಲಿ ಉಪದೇಶಿಸಿದ ವಿಚಾರಗಳನ್ನು ಪ್ರತಿಬಿಂಬಿಸುತ್ತಿದ್ದೇವೆ. ''ಸಹೋದರರೇ, ನಿಮ್ಮಲ್ಲಿ ಯಾರಾದರೂ ಯಾವುದೋ ಒಂದು ದೋಷದಲ್ಲಿ ಸಿಕ್ಕಿದರೆ ಅಂಥವನನ್ನು ಆತ್ಮನಿಂದ ನಡಿಸಿಕೊಳ್ಳುವ ನೀವು ಶಾಂತಭಾವದಿಂದ ತಿದ್ದಿ ಸರಿ ಮಾಡಿರಿ ನೀನಾದರೂ ದುಷ್ಪ್ರೇರಣೆಗೆ ಒಳಗಾಗದಂತೆ ನಿನ್ನ ವಿಷಯದಲ್ಲಿ ಎಚ್ಚರಿಕೆಯಾಗಿರು.'' ಪಾಪವು ಮತ್ತು ತಪ್ಪು ಮಾಡುವುದನ್ನು ಅಂಗೀಕರಿಸಬೇಕು ಮತ್ತು ಯಾಕೋಬನು 5:16ರಲ್ಲಿ ಉಪದೇಶಿಸಿದಂತೆ ಪಶ್ಚಾತ್ತಾಪ ಪಡಬೇಕು. ''ಹೀಗಿರಲು ನೀವು ಸ್ವಸ್ಥವಾಗಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು

ದೇವರನ್ನು ಪ್ರಾರ್ಥಿಸಿರಿ. ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ.''

## *ತಪ್ಪನ್ನು ಬಹಿರಂಗಪಡಿಸುವಾಗ ಅದ್ದರಿಂದ ಜನರು ದಾರಿತಪ್ಪಿಸಲು ನಡೆಸಬಾರದು.*

ಕೆಲವು ಬಾರಿ ಸಾರ್ವಜನಿಕವಾಗಿ ಕಾಳಜಿ ವಹಿಸಿ ವಿಚಾರಗಳನ್ನು ಪ್ರತಿಬಿಂಬಿಸಬೇಕಾಗುತ್ತದೆ ಮತ್ತು ತಪ್ಪು ಮಾಡುವುದು ಮತ್ತು ತಪ್ಪು ಮಾಡುವವರನ್ನು ಬಹಿರಂಗಪಡಿಸಬೇಕು. ಇದನ್ನು ನಾವು ಎಚ್ಚರಿಕೆ ನೀಡುವ ಉದ್ದೇಶದಿಂದ ಮತ್ತು ಇತರರನ್ನು ಸಂರಕ್ಷಿಸುವುದಕ್ಕಾಗಿ ಮಾಡುತ್ತೇವೆ. ಆದ್ದರಿಂದ ಅವರು ಅಪಾಯ ಮತ್ತು ಹಾನಿಯಿಂದ ಸಂರಕ್ಷಿಸಿಕೊಳ್ಳಬಹುದು. ಹಾಗೆಯೇ ನಮ್ಮ ಹೃದಯವು ತಪ್ಪು ಮಾಡುವವರ ಕಡೆಗೆ ಅನುಕಂಪ ಮತ್ತು ಕರುಣೆಯಿಂದ ತುಂಬಿಸಲ್ಪಡುತ್ತದೆ. ಇತರರ ಹೆಚ್ಚಿನ ಒಳ್ಳೆಯದಕ್ಕಾಗಿ ಅವರ ತಪ್ಪು ಮಾಡುವಿಕೆಯನ್ನು ಬಹಿರಂಗ ಪಡಿಸುತ್ತೇವೆ. ''ಕತ್ತಲೆಗೆ ಸಂಬಂಧವಾದ ಕೃತ್ಯಗಳಿಂದ ಯಾವ ಪ್ರಯೋಜನವೂ ಬರಲಾರದು ಅವುಗಳಲ್ಲಿ ಪಾಲುಗಾರರಾಗಿರದೆ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ. (ಎಫೆಸದವರಿಗೆ 5:11) ''ಪಾಪದಲ್ಲಿ ನಡೆಯುವವರನ್ನು ಎಲ್ಲರ ಮುಂದೆಯೇ ಗದರಿಸು ಇವರಿಂದ ಮಿಕ್ಕಾದವರಿಗೂ ಭಯವುಂಟಾಗುವುದು'' (1 ತಿಮೊಥೆಯನಿಗೆ 5:20).

ಮೇಲಿನ ಎಲ್ಲಾ ಸಂದರ್ಭಗಳಲ್ಲಿ, ಆಧಾರವಾಗಿರುವ ಪ್ರಮೇಯವು ''ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ'' (ಎಫೆಸದವರಿಗೆ 4:15)

## ಪ್ರತಿಫಲನ

ಪ್ರ.1 ನನ್ನ ಸಂಭಾಷಣೆಗಳನ್ನು ನಿಕಟವಾಗಿ ನಾನು ಪರೀಕ್ಷೆ ಮಾಡಿಕೊಂಡರೆ, ಎಷ್ಟು ಬಾರಿ ನಾನು ಹರಟೆ ಮತ್ತು ಇತರರ ಬಗ್ಗೆ ಕೆಟ್ಟದ್ದಾಗಿ ಮಾತಾಡುತ್ತೇನೆ?

☐ತುಂಬಾ ಆಗಾಗ್ಗೆ ☐ಆಗಾಗ್ಗೆ ☐ಕೆಲವು ಬಾರಿ ☐ವಿರಳವಾಗಿ

ಪ್ರ.2 ನಿಲ್ಲಿಸಲು ಪ್ರಯತ್ನ ಮಾಡದೇ ಅಥವಾ ಅದನ್ನು ಕೇಳಿಸಿಕೊಳ್ಳುವುದರಿಂದ ದೂರ ಹೋಗುವುದನ್ನು ಬಿಟ್ಟು ಇತರರ ಬಗ್ಗೆ ಜನರು ಹಬ್ಬಿಸುವ ವದಂತಿಗಳಲ್ಲಿ ಎಷ್ಟು ಬಾರಿ ಕೇಳಲು ನಾನು ಸಂತೋಷಪಡುತ್ತೇನೆ?

☐ತುಂಬಾ ಆಗಾಗ್ಗೆ ☐ಆಗಾಗ್ಗೆ ☐ಕೆಲವು ಬಾರಿ ☐ವಿರಳವಾಗಿ

# 2

# ಹರಟೆ ಜರುಗುವ ಸಾಮಾನ್ಯ ಸಂದರ್ಭಗಳು

ನಾವು ಹರಟೆ ಹೊಡೆಯುವುದನ್ನು ಎದುರುಗೊಳ್ಳುವಂತಹ ಕೆಲವು ಸಾಮಾನ್ಯ ಸಂದರ್ಭಗಳನ್ನು ಪರಿಗಣಿಸೋಣ.

## ಸಮುದಾಯ ಹರಟೆ ಮಾತು/ವದಂತಿ

ಸಾಮಾನ್ಯವಾಗಿ ವಿವಿಧ ಕಾರಣಗಳಿಗಾಗಿ ಒಟ್ಟಾಗಿ ಸಂಪರ್ಕಹೊಂದಿದ ಒಂದು ಸಮುದಾಯದ ಮಧ್ಯದಲ್ಲಿ ಒಬ್ಬರಿಗೊಬ್ಬರು ಮಾತಾನಾಡಿದ ''ಸುದ್ದಿಗಳು'' ಹರಡುತ್ತವೆ. ನಾವು ವಸತಿ ಸಮುದಾಯಗಳು ಸಾಮಾಜಿಕ ಸಮುದಾಯಗಳು ಮತ್ತು ಇನ್ನೂ ಅನೇಕವಾದವುಗಳನ್ನು ಹೊಂದಿದ್ದೇವೆ. ಸ್ಥಳೀಯ ಸಭೆಯು ಸಹ, ಕರ್ತನಾದ ಯೇಸುಕ್ರಿಸ್ತನಲ್ಲಿನ ನಮ್ಮ ನಂಬಿಕೆ ಮತ್ತು ಅನ್ಯೋನ್ಯತೆಯಿಂದ ಜನರುಗಳು ಒಟ್ಟಾಗಿ ಸಂಪರ್ಕ ಹೊಂದಿದಂತಹ ಒಂದು ಸಮುದಾಯವಾಗಿದೆ.

ಯಾವುದೇ ಸಮುದಾಯದಲ್ಲಿ, ಒಬ್ಬರಿಗೊಬ್ಬರು ಮಾಹಿತಿಗಳನ್ನು ಹಂಚಿಕೊಳ್ಳುತ್ತಾರೆ ಮತ್ತು ಮಾಹಿತಿಗಳಿರುತ್ತವೆ. ಇದು ಬಹಳ ಪ್ರಾಮುಖ್ಯವಾದುದು ಮತ್ತು ಇದು ತನ್ನದೇ ಪ್ರಯೋಜನಗಳನ್ನು ಹೊಂದಿದೆ.

ಉದಾಹರಣೆಗೆ, ಸ್ಥಳೀಯ ಸಭೆಯ ಸಮುದಾಯದ ಕುರಿತು ಸತ್ಯವೇದವು ನಮಗೆ ಹೀಗೆ ಹೇಳುತ್ತದೆ:

ರೋಮಾಪುರದವರಿಗೆ 12:15
**ಸಂತೋಷಪಡುವವರ ಸಂಗಡ ಸಂತೋಷಪಡಿರಿ. ಅಳುವವರ ಸಂಗಡ ಅಳಿರಿ.**

1 ಕೊರಿಂಥದವರಿಗೆ 12:26
**ಒಂದು ಅಂಗಕ್ಕೆ ನೋವಾದರೆ ಎಲ್ಲಾ ಅಂಗಗಳಿಗೂ ನೋವಾಗುತ್ತದೆ ಒಂದು ಅಂಗಕ್ಕೆ ಮರ್ಯಾದೆ ಬಂದರೆ ಎಲ್ಲಾ ಅಂಗಗಳಿಗೂ ಸಂತೋಷವಾಗುತ್ತದೆ.**

ಇದು ಸಾಧ್ಯಕರವಾದರೆ, ಪ್ರತಿಯೊಬ್ಬರ ಜೀವಿತಗಳಲ್ಲಿ ಜರುಗುತ್ತಿರುವಂತಹ ಒಳ್ಳೆಯದು ಮತ್ತು ಕೆಟ್ಟದರ ಕುರಿತು ತಿಳಿಯುವುದು ಅರ್ಥವಾಗಿದೆ. ಆದ್ದರಿಂದ ನಾವು ಸಂತೋಷಿಸುತ್ತೇವೆ, ನಾವು ಅಳುತ್ತೇವೆ, ನಾವು ಬಳಲುತ್ತೇವೆ. ನಾವು ಒಬ್ಬರಿಗೊಬ್ಬರು ಗೌರವಿಸುತ್ತೇವೆ ಮತ್ತು ಇಂತಹ ವಿಷಯಗಳು ಒಟ್ಟಾಗಿ ಪ್ರಯಾಣಿಸುತ್ತೇವೆ. ನಾವು ಪರಸ್ಪರ ಜೀವಿತ ಹಂಚಿಕೊಳ್ಳುತ್ತೇವೆ ಆದಾಗ್ಯೂ ಅಂತಹ ''ಸುದ್ದಿಗಳನ್ನು'' ಹಂಚಿಕೊಳ್ಳುವಂತದ್ದು ಹರಟೆಹೊಡೆಯುವುದರಲ್ಲಿ (ವದಂತಿ) ಹಿಂದೆ ದೂರುವುದು, ಅಪನಿಂದೆ, ಹಿಂದೇ ತಿವಿಯುವುದು ಅಥವಾ ಸುಳ್ಳುಕಟ್ಟು ಕಥೆ ಹೇಳುವುದರಲ್ಲಿ ತೊಡಗಿಸಿಕೊಳ್ಳದೇ ಗೌರವಾನ್ವಿತ ರೀತಿಯಲ್ಲಿ ಮಾಡಲ್ಪಡಬೇಕು.

ಆಸಕ್ತಿಕರವಾಗಿ, ಅನೇಕ ಪತ್ರಿಕೆಗಳಲ್ಲಿ ಹರಟೆ ಹೊಡೆಯುವುದರ ಸಮಸ್ಯೆಗಳ ಬಗ್ಗೆ ಗುರ್ತಿಸುತ್ತೇವೆ ಮತ್ತು ನಿಷ್ಕ್ರಿಯ ಮಾತುಗಳು ಒಂದು ಸ್ಥಳೀಯ ಸಭೆ ಅಥವಾ ಸ್ಥಳೀಯ ಸಭೆಯ ವಿಶ್ವಾಸಿಗಳ ಸಮುದಾಯಕ್ಕೆ ಪ್ರತಿನಿಧಿಸಲ್ಪಟ್ಟಿದೆ.

ಕೊರಿಂಥ ಸಭೆಗೆ, ಲೈಂಗಿಕ ಅನೈತಿಕತೆಯ ಕುರಿತು ಹೇಳಬೇಕಾಯಿತು ಮತ್ತು ಸಭೆಯನ್ನು ಪಶ್ಚಾತ್ತಾಪದ ಕಡೆಗೆ ಕರೆಯಬೇಕಿತ್ತು. ಅಪೊಸ್ತಲನಾದ ಪೌಲನು ಅವರನ್ನು ಭೇಟಿ ಮಾಡಿದಾಗ ಜನರು ''ಹಿಂದೆ ದೂರುವುದು, ಗೊಣಗುಟ್ಟುವ ಮಾತುಗಳಲ್ಲಿ'' ತೊಡಗಿಸಿಕೊಂಡಿದ್ದರ ಕುರಿತು ಹೆಚ್ಚು ಕಾಳಜಿ ಹೊಂದಿದ್ದನು.

2 ಕೊರಿಂಥದವರಿಗೆ 12:20

**ನಾನು ಬಂದಾಗ ಒಂದು ವೇಳೆ ನೀವು ನನ್ನ ಇಷ್ಟದ ಪ್ರಕಾರ ಇರುವುದಿಲ್ಲವೇನೋ ಒಂದು ವೇಳೆ ನಿಮ್ಮಲ್ಲಿ ಜಗಳ ಹೊಟ್ಟೆಕಿಚ್ಚು ದ್ವೇಷ ಸ್ವಾರ್ಥಬುದ್ಧಿ ಚಾಡಿ ಹೇಳುವುದು ಕಿವಿಯೂದುವದು ಉಬ್ಬಿಕೊಳ್ಳುವುದು ಕಲಹ ಎಬ್ಬಿಸುವುದು ಇವುಗಳು ಕಾಣಬರುವದೋ ಏನೋ ನನಗೆ ಸಂಶಯ ಉಂಟು.**

ಪೌಲನು, ಎಫೆಸ ಸಭೆಯ ಮೇಲ್ವಿಚಾರಣೆ ಮಾಡುತ್ತಿದ್ದಂತಹ ತಿಮೊಥೆಯನಿಗೆ ಬರೆಯುವಾಗ, ಅವನು ಯೌವನಸ್ಥ ವಿಧವೆಯರ ಬಗ್ಗೆ ವ್ಯಾಖ್ಯಾನಿಸುತ್ತಾನೆ ಮತ್ತು ಇದು ಎಲ್ಲರಿಗೂ ಸಾಮಾನ್ಯವಾಗಿ ಅನ್ವಯಿಸುವಂತಿತ್ತು, ಅವರು ನಿಷ್ಕ್ರಿಯರಾಗಿ ಕಂಡು ಬರುವಾಗ ಅವರು ಹರಟೆ ಹೊಡೆ(ವದಂತಿ), ಇತರ ಜನರ ವ್ಯವಹಾರಗಳಲ್ಲಿ ಮಧ್ಯಸ್ಥಿಕೆಯಲ್ಲಿ ಮತ್ತು ಅವರು ಮಾತಾಡಬೇಡದ ವಿಷಯಗಳು ಕುರಿತು ಮಾತಾನಾಡಲೂ ಪಾಲ್ಗೊಳ್ಳುತ್ತಾರೆ.

1 ತಿಮೊಥೆಯನಿಗೆ 5:13

**ಇದಲ್ಲದೆ ಅವರು ಮನೆಮನೆಗಳಿಗೆ ತಿರುಗಾಡುತ್ತಾ ಮೈಗಳ್ಳತನವನ್ನು ಕಲಿಯುತ್ತಾರೆ; ಮೈಗಳ್ಳರಾಗುವುದಲ್ಲದೆ ಹರಟೆ ಮಾತಾಡುವವರೂ ಇತರರ ಕೆಲಸದಲ್ಲಿ ಕೈ ಹಾಕುವವರೂ ಆಗಿ ಆಡಬಾರದ ಮಾತುಗಳನ್ನಾಡುತ್ತಾರೆ.**

ಅದೇರೀತಿಯಾಗಿ, ಥೆಸಲೋನಿಕದವರಿಗೆ ಬರೆಯುವಾಗ, ಇತರರ ಕಾರ್ಯಗಳಲ್ಲಿ ಕೈ ಹಾಕುವ ಜನರುಗಳು, ಕಾರ್ಯನಿರತರಾಗಿರುವುದನ್ನು ಪೌಲನು ಖಂಡಿಸುತ್ತಾನೆ. ಇದರ ಭಾಗವಾಗಿ ಹರಟೆಹೊಡೆಯುವುದು ಮತ್ತು ಇತರ ಜನರುಗಳ ಬಗ್ಗೆ ನಿಷ್ಕ್ರಿಯ ಮಾತುಗಳನ್ನು ಒಳಗೊಂಡಿದೆ. ಪೌಲನು ಅಂತಹ ಜನರಿಗೆ ಕೆಲಸ ಮಾಡಲೂ ಆಜ್ಞಾಪಿಸುತ್ತಾನೆ.

2 ಥೆಸಲೊನಿಕದವರಿಗೆ 3:11, 12

**ಆದರೆ ನಿಮ್ಮಲ್ಲಿ ಕೆಲವರು ಯಾವ ಕೆಲಸವನ್ನು ಮಾಡದೆ ಇತರರ ಕೆಲಸದಲ್ಲಿ ಮಾತ್ರ ತಲೆ ಹಾಕಿ ಅಕ್ರಮವಾಗಿ ನಡೆಯುತ್ತಾರೆಂದು ವರ್ತಮಾನ ಕೇಳಿದ್ದೇವೆ. ಇಂಥವರು ತಮ್ಮ ಕೆಲಸವನ್ನು ನೋಡುತ್ತಾ ತಾವೇ ಸಂಪಾದಿಸಿದ್ದನ್ನು ಊಟ ಮಾಡಬೇಕೆಂದು ಕರ್ತನಾದ ಯೇಸು ಕ್ರಿಸ್ತನಲ್ಲಿ ನಾವು ಆಜ್ಞಾಪಿಸಿ ಪ್ರಬೋಧಿಸುತ್ತೇವೆ.**

ಸ್ಥಳೀಯ ಸಭೆಯ ಸಮುದಾಯಗಳಲ್ಲಿ ಹರಟೆ ಮಾತು ಬಹುಶಃ ಆತ್ಮಿಕ ಮಾದರಿಯಲ್ಲಿ ಜರುಗುತ್ತವೆ. ಸಭೆಯ ಸಭಿಕರುಗಳು ಮತ್ತು ಸಭಾ ನಾಯಕರುಗಳು (ಅಂದರೆ ಸಭಾಪಾಲಕರು ಇತ್ಯಾದಿ) ಹರಟೆ ಮಾತುಗಳಲ್ಲಿ ತೊಡಗಿಸಿಕೊಳ್ಳುತ್ತಾರೆ ಮತ್ತು ವದಂತಿಗಳನ್ನು ಹಬ್ಬಿಸುತ್ತಾರೆ. ಸ್ಥಳೀಯ ಸಭಾ ಸಮುದಾಯಗಳಲ್ಲಿ ಹರಟೆ ಮಾತು ಹರಡುವ ಕೆಲವು ಸಾಮಾನ್ಯ ಮಾರ್ಗಗಳು ಇಲ್ಲಿವೆ.

**ಪ್ರಾರ್ಥನೆ ಮನವಿಗಳು:** ಸಾಮಾನ್ಯವಾಗಿ ಸಂಭಾಷಣೆಯು ತುಂಬಾ ಆತ್ಮಿಕ ರೀತಿಯಲ್ಲಿ ಇಂತಹ ವ್ಯಾಖ್ಯಾನದೊಂದಿಗೆ ಪ್ರಾರಂಭವಾಗುತ್ತದೆ. ''ಓ ನಾವು ನಿಜವಾಗಿಯೂ ಹೀಗೆ ಮತ್ತು ಹೀಗಾಗಿ ಪ್ರಾರ್ಥಿಸಬೇಕೆಂಬುದು ಅವಶ್ಯಕವಾಗಿದೆ.'' ಮತ್ತು ಉಳಿದ ಎಲ್ಲಾ ಸಂಭಾಷಣೆಯು ಆ ವ್ಯಕ್ತಿಯ ಬಗ್ಗೆ ಹರಟೆ ಮಾತು ಮತ್ತು ಹೊಲಸು ಮಾತಾಗಿರುತ್ತದೆ ಮತ್ತು ''ಇದನ್ನು ಪ್ರಾರ್ಥನೆಯಲ್ಲಿ ಇಟ್ಟುಕೊಳ್ಳಿರಿ'' ಎಂಬುದರೊಡನೆ ಕೊನೆಗೊಳ್ಳುತ್ತದೆ. ಹರಟೆ ಮಾತಿನಲ್ಲಿ ಸತ್ಯವಾಗಿ ಇರುವಂತದಂತದ್ದನ್ನು ಮುಚ್ಚಲು ಈ ಪ್ರಾರ್ಥನಾ ಮನವಿಗಳನ್ನು ಮುಖಭಾಗಗಳಾಗಿ ಉಪಯೋಗಿಸುತ್ತೇವೆ. ಇದು ನಿಲ್ಲಬೇಕು ಇದರಿಂದ ದೂರವಾಗಿರುವುದನ್ನು ನಾವು ಆರಿಸಿಕೊಳ್ಳೋಣ.

**ಸಭಾಪಾಲಕರ ಸಮಾಲೋಚನೆ ಮತ್ತು ಮಾರ್ಗದರ್ಶನ:** ಸಭಾಪಾಲಕರು ಮತ್ತು ಆತ್ಮಿಕ ನಾಯಕರುಗಳಾಗಿ, ಜನರು ಆತ್ಮಿಕ ಸಹಾಯಕ್ಕಾಗಿ ನಮ್ಮ ಬಳಿಗೆ ಬರುತ್ತಾರೆ. ಅನೇಕ ಬಾರಿ ಇದನ್ನು ಮಾಡುವಾಗ ಅವರ ವೈಯಕ್ತಿಕ ಹೋರಾಟಗಳು, ಸೋಲುಗಳು ಮತ್ತು ಇತರರೊಂದಿಗೆ ಅವರೊಂದಿಗೆ ಅವರು ಹಂಚಿಕೊಳ್ಳಲಾಗದಂತಹ ಇತರ ವಿಷಯಗಳನ್ನು ಹಂಚಿಕೊಳ್ಳುತ್ತಾರೆ. ಅವರು ಇದನ್ನು ಗಾಢ ನಂಬಿಕೆ ಮತ್ತು ಭರವಸೆಯಿಂದ ಹಂಚಿಕೊಳ್ಳುತ್ತಾರೆ. ಆದಾಗ್ಯೂ ಅನೇಕ ಸಭಾಪಾಲಕರು ಮತ್ತು ಆತ್ಮಿಕ ನಾಯಕರುಗಳು ಇಂತಹ ವೈಯಕ್ತಿಕವಾದ ಮಾಹಿತಿಯನ್ನು ಇತರರೊಂದಿಗೆ ಸಾಂದರ್ಭಿಕ ಸಂಭಾಷಣೆಯಲ್ಲಿ ಬಹಿರಂಗಪಡಿಸುವುದರಿಂದ ಭರವಸೆಯನ್ನು ಮುರಿದ ತಪ್ಪಿತಸ್ಥ ಸ್ಥಿತಿಯಲ್ಲಿದ್ದಾರೆ. ಇದು ಏನು ಅಲ್ಲ ಆದರೆ ಒಬ್ಬ ಆತ್ಮಿಕ ನಾಯಕನಿಂದ ಮಾಡಲ್ಪಟ್ಟಂತಹ ಹರಟೆಯ ಮಾತಾಗಿದೆ! ಇದು ನಿಲ್ಲಿಸಲ್ಪಡಬೇಕು. ವಿಶ್ವಾಸಾರ್ಹವಾಗಿ ಹಂಚಿಕೊಳ್ಳಲ್ಪಟ್ಟಿದ್ದು ವಿಶ್ವಾಸಾರ್ಹವಾಗಿಯೇ ಉಳಿದುಕೊಳ್ಳಬೇಕು.

**ಖ್ಯಾತ ವ್ಯಕ್ತಿಯೊಂದಿಗಿನ ಸಹಯೋಗ:** ಕೆಲವೊಮ್ಮೆ ಜನರು ಹೆಚ್ಚು ನಿಪುಣ ಜನರ ಕೂಟಗಳಲ್ಲಿ ಸವಾರಿ ಮಾಡಲೂ ಬಯಸುತ್ತಾರೆ. ಉದಾಹರಣೆಗೆ: ಒಬ್ಬ ಹಿರಿಯ ಸಭಾಪಾಲಕ ಅಥವಾ ನಾಯಕರು, ಇತರರಿಗೆ ಅವರುಗಳು ಬಹಳವಾಗಿ ಆತ್ಮೀಯವಾಗಿ ಸಹಾಯಕರಾಗಿದ್ದಾರೆ ಅಥವಾ ಅವರೊಂದಿಗೆ ಸಂಪರ್ಕ ಹೊಂದಿದ್ದಾರೆಂಬುದನ್ನು ತೋರಿಸಲು ಪ್ರಯತ್ನಿಸುತ್ತಾರೆ. ಅವರು ಸಹಯೋಗ ಹೊಂದಲೂ ಬಯಸುವಂತಹ ವ್ಯಕ್ತಿಗಳ ಬಗ್ಗೆ ಖಾಸಗೀ ಮತ್ತು ಕೆಲವು ವೈಯಕ್ತಿಕ ಮಾಹಿತಿಯೊಂದಿಗೆ ಝಳಪಿಸುವಿಕೆಯೊಂದಿಗೆ ಇದನ್ನು ಅವರು ಮಾಡುತ್ತಾರೆ. ಖಂಡಿತವಾಗಿ ಇತರರು ಪ್ರಭಾವಿತರಾಗಬಹುದು ಮತ್ತು ಇಂತಹ ಆಂತರಿಕ ಮಾಹಿತಿಗಳು ಗೊತ್ತಿರುವಂತಹ ಈ ವ್ಯಕ್ತಿಯು ಹಿರಿಯ ಸಭಾಪಾಲಕರು ಅಥವಾ ನಾಯಕರುಗಳಿಗೆ ನಿಕಟವಾಗಿದ್ದಾರೆಂದು ಆಲೋಚಿಸುತ್ತಾರೆ. ಸಾಮಾನ್ಯವಾಗಿ ಇದು ಬೇರೆ ಏನು ಅಲ್ಲ ಹರಟೆಯಾಗಿದೆ. ನೀವು ನಿಜವಾಗಿಯೂ ಆತ್ಮೀಯ ಸ್ನೇಹಿತನಾಗಿದ್ದು ಮತ್ತು ನಿಮ್ಮ ಹಿರಿಯ ಸಭಾಪಾಲಕ ಅಥವಾ ನಾಯಕನೊಂದಿಗೆ ನಿಕಟವಾಗಿ ಸಹಾಯಕರಾಗಿದ್ದರೆ, ನೀವು ಅವರ ಖ್ಯಾತಿಯ ಮೇಲೆ ಹೋಗಬಾರದು. ಅವರ ಗೌರವವನ್ನು ನಿಮಗಾಗಿ ಎರವಲು ತೆಗೆದುಕೊಳ್ಳಬಾರದು. ಸಾರ್ವಜನಿಕವಾಗಿ, ಖಾಸಗೀಯ ವಿಷಯಗಳನ್ನು ಪ್ರಸ್ತಾಪಿಸುವಾಗ ನೀವು ಬಹಳ ಜಾಗರೂಕರಾಗಿರಬೇಕು.

**ತೊಂದರೆಯನ್ನು ಬಗೆಹರಿಸುವ ಬದಲಿಗೆ ತಪ್ಪುಗಳನ್ನು ತೋರಿಸುವುದು:** ಜನರು ತಪ್ಪುಗಳನ್ನು ಮಾಡುತ್ತಾರೆ. ಆದರೂ ಒಂದು ಸಮುದಾಯದಲ್ಲಿ ಯಾರೋ ಒಬ್ಬರು ಎಲ್ಲಿಯೋ ಮಾಡಿದ ಒಂದು ತಪ್ಪಿನಿಂದಾಗಿ, ಏನೋ ತಪ್ಪಾಗಿರಬಹುದು ಅಥವಾ ವಿಚಾರಗಳನ್ನು ಕ್ರಮಬದ್ಧವಾಗಿ ನಿರ್ವಹಿಸದಿರುವುದರಿಂದ ಜಗಳಗಳು ಎದ್ದೇಳಬಹುದು. ಆಗಾಗ್ಗೆ ಏನಾಗುತ್ತೆಂದರೆ ಮನನೊಂದಿರುವ ಪಂಗಡದವರು ತಪ್ಪು ಮಾಡಿದಂತಹ ವ್ಯಕ್ತಿಯು ಕುರಿತು ಪರೋಕ್ಷವಾಗಿ ಒಂದು ಅಭಿಯಾನವು ದೋಷಪೂರಿತವಾಗಿದೆ ಎಂಬುದಾಗಿ ತಮಗೆ ತಪ್ಪು ಮಾಡಿದವರ ಕುರಿತು ಎಲ್ಲಾ ಕಡೆ ಮಾತಾಡುತ್ತಾರೆ. ಇದು ಹರಟೆ ಮಾತಾಗಿ ಕಂಡು ಬರುತ್ತದೆ ಹೆಚ್ಚಿನ ಜನರು ಮಾಹಿತಿಗಳನ್ನು ಎಲ್ಲಾ ಕಡೆ ಹರಡಲು ತೊಡಗಿಸಿಕೊಳ್ಳಲೂ ಪ್ರಾರಂಭಿಸುತ್ತಾರೆ. ಇವೆಲ್ಲವೂ ಸಾಮಾನ್ಯವಾಗಿ ತೊಂದರೆಯನ್ನು ಬಗೆಹರಿಸದೇ ಅಥವಾ ಪ್ರತಿನಿಧಿಸದೇ, ಬದಲಾಗಿ ಸಮುದಾಯದಲ್ಲಿ ಜಗಳ ಮತ್ತು ವಿಭಾಗಗಳು ಹೆಚ್ಚಾಗಲೂ ಕಾರಣವಾಗುತ್ತದೆ. ಇನ್ನೊಂದು ಕಡೆಯಲ್ಲಿ ಅಂತಹ ಸಂದರ್ಭಗಳಲ್ಲಿ ಏನು ಮಾಡಬೇಕೆಂಬುದಾಗಿ ದೇವರ ವಾಕ್ಯವು ಬೋಧಿಸುತ್ತದೆ.

ಮತ್ತಾಯ 18:15-17

**ಇದಲ್ಲದೆ ನಿನ್ನ ಸಹೋದರನು ತಪ್ಪು ಮಾಡಿದರೆ ನೀನು ಹೋಗಿ ನೀನು ಅವನೂ ಇಬ್ಬರೇ ಇರುವಾಗ ಅವನ ತಪ್ಪನ್ನು ಅವನಿಗೆ ತಿಳಿಸು ಅವನು ನಿನ್ನ ಮಾತನ್ನು ಕೇಳಿದರೆ ನಿನ್ನ ಸಹೋದರನನ್ನು ಸಂಪಾದಿಸಿಕೊಂಡಿರುವಿ. ಅವನು ಕೇಳದೆ ಹೋದರೆ ಎರಡು ಮೂರು ಸಾಕ್ಷಿಗಳ ಬಾಯಿಂದ ಪ್ರತಿಯೊಂದು ಮಾತು ಸ್ಥಾಪನೆಯಾಗುವ ಹಾಗೆ ಇನ್ನೂ ಒಬ್ಬಿಬ್ಬರನ್ನು ನಿನ್ನ ಸಂಗಡ ಕರಕೊಂಡು ಹೋಗು. ಅವನು ಅವರ ಮಾತನ್ನು ಕೇಳದೆ ಹೋದರೆ ಸಭೆಗೆ ಹೇಳು ಆದರೆ ಸಭೆಯ ಮಾತನ್ನೂ ಕೇಳದೆ ಹೋದರೆ ಅವನು ನಿನಗೆ ಅಜ್ಞಾನಿಯಂತೆಯೂ ಭ್ರಷ್ಟನಂತೆಯೂ ಇರಲಿ.**

ಸಾರ್ವಜನಿಕವಾಗಿ ವಿಚಾರಗಳನ್ನು ಬಗೆಹರಿಸದೇ, ಜನರ ತಪ್ಪುಗಳನ್ನು ಕುರಿತು ತೋರಿಸುವುದರ ಬದಲಾಗಿ ನಾವುಗಳು ದೇವರ ವಾಕ್ಯಕ್ಕೆ ಅನುಗುಣವಾಗಿ ಕಾರ್ಯ ಮಾಡಬೇಕು ಮತ್ತು ಕ್ಷಮಾಪಣೆ, ತಿದ್ದುಪಡಿ ಮತ್ತು ಸ್ವಸ್ಥತೆಯನ್ನು ತರುವ ಕಡೆಗೆ ಕೆಲಸಮಾಡಬೇಕು.

ಸ್ಥಳೀಯ ಸಭೆ ಸಮುದಾಯದಲ್ಲಿ ಹೇಳಲ್ಪಟ್ಟಂತಹ ಅನೇಕ ವಿಷಯಗಳು ಇತರೆ ಸಮುದಾಯಗಳಿಗೂ ಅನ್ವಯಿಸಬಹುದು.

ಹರಟೆ ಮಾತಿನಲ್ಲಿ ನಿರತವಾದಂತಹ ಒಂದು ಸಮುದಾಯವು ಅಂತಿಮವಾಗಿ ಸ್ವಯಂ ನಾಶನದಲ್ಲಿ ಕೊನೆಗೊಳ್ಳುತ್ತಾರೆ.

ಗಲಾತ್ಯದವರಿಗೆ 5:15
**ಆದರೆ ನೀವು ಒಬ್ಬರನ್ನೊಬ್ಬರು ಕಚ್ಚಿ ಹರಕೊಂಡು ನುಂಗುವವರಾದರೆ ಒಬ್ಬರಿಂದೊಬ್ಬರು ನಾಶವಾದೀರಿ, ನೋಡಿರಿ.**

## ಕೆಲಸದ ಸ್ಥಳದ ಹರಟೆ ಮಾತು

ನಮ್ಮಲ್ಲಿ ಅನೇಕರು, ನಮ್ಮ ಜೀವಿತದ ಪ್ರಮುಖ ಭಾಗವಾದ ಕೆಲಸದ ಸ್ಥಳದಲ್ಲಿ ಸಮಯ ಕಳೆಯುತ್ತಾರೆ. ಒಂದು ವಾರದಲ್ಲಿ ಐದರಿಂದ ಆರುದಿನಗಳು ಕೆಲಸದಲ್ಲಿ ನಾವು ಇರುತ್ತೇವೆ. ನಮ್ಮ ಕೆಲಸದ ಸ್ಥಳದಲ್ಲಿ ಕಾಲು ಭಾಗದಷ್ಟು ಸಮಯ ಕಳೆಯುತ್ತೇವೆ. ದುರಾದೃಷ್ಟಕರವಾಗಿ ಕೆಲಸದ ಸ್ಥಳದಲ್ಲಿ ಅನೇಕ ಜನರು ಹರಟೆ ಮಾತಿನಲ್ಲಿ, ಹಿಂದೆ ದೂರುವುದು, ಅಪನಿಂದೆ, ಹಿಂದೆ-ತಿವಿಯುವುದು ಅಥವಾ ಕಟ್ಟುಕಥೆ ಹೇಳುವುದು. ಅವರುಗಳ ಜೊತೆ ಕೆಲಸಮಾಡುವಂತಹ ಇತರರು ಅಥವಾ ಜೊತೆ ಕೆಲಸಗಾರರು ಮಾಲೀಕನ ಬಗ್ಗೆ ಇದನ್ನು ಮಾಡುತ್ತಾರೆ. ಅವರು ಹರಟೆ ಮಾತಿನಲ್ಲಿ ತೊಡಗಿಸಿಕೊಳ್ಳುತ್ತಾರೆ. ಬೇರೊಬ್ಬರ ಕುರಿತು ಜೊತೆ ಕೆಲಸಗಾರರೊಂದಿಗೆ ಅವರ ಖ್ಯಾತಿಯನ್ನು ದುರುಪಯೋಗ ಪಡಿಸಿಕೊಳ್ಳಲೂ ಮಾಡುವಂತಹವರಾಗಿರುತ್ತಾರೆ.

ಕೆಲಸದ ಸ್ಥಳದ ಹರಟೆ ಮಾತು ಅನಾರೋಗ್ಯಕರ ಕೆಲಸದ ಪರಿಸರವನ್ನುಂಟು ಮಾಡುವುದರ ಫಲಿತಾಂಶ ನೀಡುತ್ತದೆ. ಇದು ಜನರ ಭಾವನೆಗಳಲ್ಲಿ ಪರಿಣಾಮ ಬೀರುತ್ತದೆ ಮತ್ತು ವೈಯಕ್ತಿಕ ಅಥವಾ ತಂಡದ ಕಾರ್ಯಕ್ಷಮತೆಗೆ ಅಡ್ಡಿಯನ್ನುಂಟು ಮಾಡುತ್ತದೆ. ಅಂತಿಮವಾಗಿ ಕೆಲಸದ ಪರಿಸರವು ಅಸಹ್ಯಕರವಾಗಿ ಕಂಡುಬರುತ್ತದೆ. ಜನರು ಸಾಮಾನ್ಯವಾಗಿ ಒಳ್ಳೆಯ ಜನರಾಗಿರುವಂತಹವರು ಕೆಲಸ ಬಿಟ್ಟು ಬೇರೆಕಡೆ ಉದ್ಯೋಗ ಹುಡುಕಿಕೊಳ್ಳುತ್ತಾರೆ. ಅವರು ಸಂಬಳ ಕಡಿಮೆ ಆಗಿದೆ ಎಂಬುದಾಗಿ ಅಥವಾ ಕೆಲಸವು ಅಷ್ಟು ಮೆಚ್ಚಿಕೆಯಾಗಿಲ್ಲ ಎಂಬುದಾಗಿ ಅಲ್ಲ, ಕೆಲವು ಜನರ ಹರಟೆ ಮಾತು ಮತ್ತು ವದಂತಿ ಹಬ್ಬಿಸುವುದರಿಂದ ಕೆಲಸದ ಪರಿಸರವು ತೊಂದರೆಗೀಡಾದದ್ದರಿಂದ ಕೆಲಸ ಬಿಟ್ಟು ಬಿಡುತ್ತಾರೆ. ಅವರ ಕೆಲಸದ ಮೇಲೆ ದೃಷ್ಟಿಯನ್ನಿಡಲೂ ಬಯಸುವ ಉತ್ತಮ ಜನರು ಅವರ ಸಮಯ ವಿಸ್ತರಿಸಲು ಹರಟೆಯೊಡನೆ ಹೋರಾಡಲು ಮತ್ತು ವದಂತಿಯ ಜ್ವಾಲೆಯನ್ನು ಹೊರ ಹಾಕಲೂ ಬಲವನ್ನು ಉಪಯೋಗಿಸಲೂ ಅಪೇಕ್ಷಿಸುವುದಿಲ್ಲ. ಉತ್ತಮವಾದ ವಿಷಯಗಳನ್ನು ಮಾಡುವಂತದ್ದು ಅವರಿಗಿದೆ.

## (ಇ.) ಸಾಮಾಜಿಕ ಮಾಧ್ಯಮದ ಹರಟೆ

ಸಾಮಾಜಿಕ ಮಾಧ್ಯಮಗಳು ಸಹ ಬಹಳ ವೇಗವಾದ ರೀತಿಯಲ್ಲಿ ಹರಟೆ ಹೊಡೆಯುವುದನ್ನು ಪ್ರಸಾರ ಮಾಡುವುದನ್ನು ಒದಗಿಸುತ್ತಿವೆ. ಕೆಲವು ನಿಮಿಷಗಳು ಮಾತ್ರದ ಹಾನಿಕಾರಕ ಹರಟೆಗಳು ಮತ್ತು ವದಂತಿಗಳನ್ನು ಒಂದು ಬಟನ್ ಹೊತ್ತುವುದರಿಂದ ಆನ್‌ಲೈನ್‌ಗಳಲ್ಲಿ ಹರಡುತ್ತವೆ. ಆನ್‌ಲೈನ್‌ನಲ್ಲಿ ಹಾಕಲಾದಂತಹ ಒಂದು ಲೇಖನದ ಮೂಲಕವಾಗಿ ಒಬ್ಬ ವ್ಯಕ್ತಿಯ ಗೌರವವು ನಾಶವಾಗುತ್ತದೆ.

### ಪ್ರತಿಫಲನ

ಪ್ರ. ನೀವು ಸಮುದಾಯದ, ಕೆಲಸದ ಸ್ಥಳದ ಅಥವಾ ಸಾಮಾಜಿಕ ಮಾಧ್ಯಮದ ಹರಟೆಯ ಮಾತುಗಳಿಗೆ ಬಲಿಯಾದವರಾಗಿದ್ದೀರಾ? ನೀವು ಹೇಗೆ ಇದರಿಂದ ತೊಂದರೆಗೆ ಒಳಗಾಗಿದ್ದೀರಾ? ನೀವು ಇದನ್ನು ಹೇಗೆ ನಿಭಾಯಿಸುತ್ತೀರಿ? ಹಿಂತಿರುಗಿ ನೋಡುವುದಾದರೆ ಪರಿಸ್ಥಿತಿಗಳನ್ನು ನೀವು ವ್ಯತ್ಯಾಸಕರವಾದ ರೀತಿಯಲ್ಲಿ ನಿಭಾಯಿಸಿದ್ದೀರಾ?

# 3

# ಹರಟೆ ಮಾತಿನ ನಕಾರಾತ್ಮಕ ಪರಿಣಾಮಗಳು

ಹರಟೆಯು ಇತರೆ ಹಿಂಸಾತ್ಮಕ ಅಪರಾಧಗಳಾಗಿ ಕಂಡು ಬರದಿದ್ದಾಗಲೂ, ಹರಟೆಯು ನಮ್ಮ ಮೇಲೆ ಮತ್ತು ಇತರರ ಮೇಲೆ ಬೀರುವಂತಹ ಗಂಭೀರ ನಕಾರಾತ್ಮಕ ಪರಿಣಾಮವನ್ನು ನಮ್ಮಲ್ಲಿ ಅನೇಕರು ಗುರ್ತಿಸುವುದಿಲ್ಲ. ನಾವು ಹಿಂದೆಯೇ ಹರಟೆಯ ನಕಾರಾತ್ಮಕ ಪರಿಣಾಮಗಳನ್ನು ಈಗಾಗಲೇ ವ್ಯಾಖ್ಯಾನಿಸಿದ್ದಾಗಲೂ, ಈ ಒಂದು ಅಧ್ಯಾಯದಲ್ಲಿ ಕೆಲವುಗಳನ್ನು ಪರಿಗಣಿಸೋಣ.

## ಹರಟೆಯು ಅನುತ್ಪಾದಕ ಮತ್ತು ಸಮಯ ವ್ಯರ್ಥ ಮಾಡುವಂತದ್ದು

ಹರಟೆಯಲ್ಲಿ ತೊಡಗಿಕೊಂಡಿರುವ ಜನರೊಡನೆ ಕೆಲವು ಬಾರಿ ಅನೇಕ ಗಂಟೆಗಳೇ ಕಳೆದು ಹೋಗುತ್ತವೆ. ಆದ್ದರಿಂದ ಇದು ''ನಿಷ್ಕ್ರಿಯ ಮಾತು'' (ಜಡ ಮಾತು) ಎಂಬುದಾಗಿ ಕರೆಯಲ್ಪಡುತ್ತದೆ. ಇದು ಸಂಪೂರ್ಣವಾಗಿ ಅನುತ್ಪಾದಕವಾದುದಾಗಿದೆ. ಇದು ಸಮಯವನ್ನು ವ್ಯರ್ಥ ಮಾಡುವುದು ಮಾತ್ರವಲ್ಲದೇ, ಹರಟೆಯಲ್ಲಿ ತೊಡಗಿಸಿಕೊಂಡಿರುವವರು ಭಾವನಾತ್ಮಕವಾಗಿ ಬಲವನ್ನು ಅಧಿಕವಾಗಿ ವೆಚ್ಚ ಮಾಡುತ್ತಾರೆ ಮತ್ತು ಇದರ ಕೊನೆಯಲ್ಲಿ ಬರಿದು ಮಾಡಿಕೊಂಡವರಂತೆ ಭಾವನೆಯುಳ್ಳವರಾಗುತ್ತಾರೆ.

ಕೆಲವು ಸಮಯಗಳಲ್ಲಿ ಜನರು ಹರಟೆಯಲ್ಲಿ ತಮ್ಮನ್ನು ತೊಡಗಿಸಕೊಳ್ಳುವಾಗ ''ಹೊರಹಾಕಲು'' ಚಿಕಿತ್ಸಕ ಅಳತೆಗಳಂತೆ ಅಥವಾ ವಿಶೇಷವಾಗಿ ಕಠಿಣವಾದ ಸಮಯಗಳಲ್ಲಿ ಹಾದು ಹೋಗುವಂತಹವರ ಭಾವನೆಗಳನ್ನು ಹಂಚಿಕೊಳ್ಳುತ್ತಾರೆ. ಹೊರ ಮಾತಾನಾಡುವುದರ ಪ್ರಾಮುಖ್ಯತೆ ಮತ್ತು ಒಬ್ಬರ ಸವಾಲುಗಳನ್ನು ಹಂಚಿಕೊಳ್ಳುವುದನ್ನು ನಿಶ್ಚಯವಾಗಿ ನಾವು ಒಪ್ಪಿಕೊಳ್ಳುವ ಹಾಗೆಯೇ ಇದು ಸರಿಯಾದ ಜನರೊಡನೆ ಮಾತಾನಾಡುವುದರಿಂದ ಮತ್ತು ಇನ್ನೊಬ್ಬರನ್ನು ವ್ಯಕ್ತಿಗತವಾಗಿ ಹರಿದು ಬಿಡದೆ ಮತ್ತು ತೊಂದರೆಯ ಪರಿಹಾರದ ಕಡೆಗೆ ಕಾರ್ಯ ಮಾಡುವ ಪರಿಶ್ರಮದೊಡನೆ ಇದು ಮಾಡಲ್ಪಡಬೇಕು.

## ಹರಟೆಯು, ಒಬ್ಬ ವ್ಯಕ್ತಿಯ ಗೌರವ ನಾಶವಾಗುವುದರಿಂದ ನಂಬಿಕೆ ಕಳೆದುಕೊಳ್ಳುತ್ತದೆ ಮತ್ತು ಗುಣ ನಡತೆಯು ನಾಶಾವಾಗುತ್ತದೆ.

ಹರಟೆಯು ಮಾತಾಡುವ ವ್ಯಕ್ತಿಯು ತನ್ನನ್ನು ವಿವರಿಸುವ ಅವಕಾಶವನ್ನು ಹೊಂದಿರುವುದಿಲ್ಲ ಅವನು ''ಹತ್ಯೆಯಾದವನಾಗಿರುತ್ತಾನೆ'' ಮತ್ತು ಅವನ ಗೌರವವು ನಾಶವಾಗಿರುತ್ತದೆ. ಕ್ಷಣ ಮಾತ್ರದಲ್ಲಿ ತಪ್ಪು ಮಾಹಿತಿಗಳನ್ನು ಕೇಳುವಂತಹ ಜನರು, ವೈಯಕ್ತಿಕವಾಗಿ ಗುಣನಡತೆಯ ಮುಕ್ತಾಯಕ್ಕೆ ಬರುತ್ತಾರೆ, ತಪ್ಪಾಗಿ ವ್ಯಕ್ತಿಗಳಿಗೆ ತೀರ್ಪು ಮಾಡುತ್ತಾರೆ ಮತ್ತು ಆ ವ್ಯಕ್ತಿಯಲ್ಲಿ ಭರವಸೆ ಕಳೆದುಕೊಳ್ಳುತ್ತಾರೆ. ಹರಟೆಯ ಮೂಲಕವಾಗಿ ತಪ್ಪಾದ ಮಾಹಿತಿ ಒದಗಿಸಿದರಿಂದ ಆ ವ್ಯಕ್ತಿಯ ಬಗ್ಗೆ ಅವರು ತಪ್ಪಾದ ಚಿತ್ರಣ ಹೊಂದುವುದರೊಂದಿಗೆ ಕೊನೆಗೊಳ್ಳುತ್ತಾರೆ.

ಜ್ಞಾನೋಕ್ತಿಗಳು 11:13
**ಚಾಡಿಕೋರನು ಗುಟ್ಟು ರಟ್ಟು ಮಾಡುವನು - ನಂಬಿಗಸ್ತನು ಸಂಗತಿಯನ್ನು ಗುಪ್ತಪಡಿಸುವನು.**

ನೀವು ನಂಬಿಗಸ್ತನಾದ ಸ್ನೇಹಿತನಾಗಿರುವಾಗ, ನಿಮ್ಮ ಸ್ನೇಹಿತನೊಂದಿಗೆ ನೀವು ನಿಂತುಕೊಳ್ಳುವುದನ್ನು ಮತ್ತು ಅವನ ವೈಫಲ್ಯತೆಗಳ ವಿಫಲತೆಯನ್ನು ಪ್ರಕಟಿಸಿದೇ ಅಥವಾ ಅವನನ್ನು ನಾಶಮಾಡದಂತೆ ಅವನೊಡನೆ ನಿಂತುಕೊಳ್ಳಬೇಕು.

ಕೆಲವು ಬಾರಿ, ಯಾರಾದರೊಬ್ಬರನ್ನು ಮೊದಲ ಬಾರಿಗೆ ಭೇಟಿ ಮಾಡುವಂತದ್ದು ಆಘಾತಕಾರಿಯಾಗಿರುತ್ತದೆ ಮತ್ತು ನಿಮ್ಮ ಬಗ್ಗೆ ಈಗಾಗಲೇ ಕೇಳಲ್ಪಟ್ಟಿರುತ್ತಾರೆ ಎಂಬುದಾಗಿ ತೋರುತ್ತದೆ ಮತ್ತು ದುರದೃಷ್ಟಕರವಾಗಿ ಅವು ಕೇಳಿರುವಂತದ್ದೆಲ್ಲವೂ ನಕಾರಾತ್ಮಕವಾಗಿದ್ದಾಗಿರುತ್ತದೆ. ಹರಟೆ ಮಾತು ಮೊದಲೇ ತಲುಪಿದೆ ಎಂಬುದಾಗಿ ತೋರುತ್ತದೆ ಮತ್ತು ನೀವು ಅಲ್ಲಿಗೆ ಹೋಗುವ ಮೊದಲೇ ನಿಮ್ಮ ಹೆಸರು ಹಾನಿಗೊಳಗಾಗಿರುತ್ತದೆ. ಆದ್ದರಿಂದ ಆ ವ್ಯಕ್ತಿಯು ನಿಮ್ಮನ್ನು ನಿಜವಾಗಿ ತಿಳಿದುಕೊಳ್ಳಲೂ ಸಹಾಯ ಮಾಡಲೂ ದೊಡ್ಡ ಕಾರ್ಯಗಳನ್ನು ಮಾಡುವ ಪ್ರಯತ್ನವನ್ನು ಮತ್ತು ನೀವು ಸತ್ಯವಾಗಿ ಯಾರು ಎಂಬುದನ್ನು ಒಂದು ಹೊಸ ಮೌಲ್ಯಮಾಪನ ಮಾಡಬೇಕಾದ್ದನ್ನು ನೀವು ಎದುರಿಸುತ್ತೀರಿ. ಕೆಲವು ಬಾರಿ ಇದರ ಮೂಲಕವಾಗಿ ಕಾರ್ಯ ಮಾಡುವಂತಹ ಆಲೋಚನೆಯು ಸ್ವತಃ ಅವಮಾನಕರವಾಗಿರುತ್ತದೆ.

## ಹರಟೆಯು ಜನರ ಭಾವನೆಗಳಿಗೆ ಹಾನಿ ಮಾಡುತ್ತದೆ

ಹರಟೆಯ ಮೂಲಕ ಕಾಳ್ಗಿಚ್ಚಿನಂತೆ ಹರಡುವ ತಪ್ಪು ಮಾಹಿತಿಗಳು ಭಾವನೆಗಳ ಕಾರ್ಯದಲ್ಲಿ ಆತಂಕವನ್ನು ಉಂಟುಮಾಡುತ್ತವೆ ಮತ್ತು ಜನರಿಗೆ ಅವಮಾನಕರವನ್ನುಂಟು ಮಾಡುತ್ತದೆ.

ಜ್ಞಾನೋಕ್ತಿಗಳು 25:18

**ಇತರರ ಬಗ್ಗೆ ಸುಳ್ಳು ಹೇಳುವವರನ್ನು ಅವರನ್ನು ಕೊಡಲಿಯಿಂದ ಹೊಡೆದು ಗಾಯ ಮಾಡಿದಂತೆ, ಕತ್ತಿಯಿಂದ ಅವರನ್ನು ಗಾಯಗೊಳಿಸಿದಂತೆ ಅಥವಾ ಚೂಪಾದ ಬಾಣದಿಂದ ಅವರನ್ನು ಹೊಡೆದಂತೆ.**

ಉದಾಹರಣೆಗೆ ಕೆಲಸದ ಸ್ಥಳದಲ್ಲಿ, ಸಂಗತಿಯು ಏನು ಮತ್ತು ಅದು ಯಾವುದಲ್ಲ ಎಂಬುದರ ಬಗ್ಗೆ ಸೂಕ್ತ ಮಾಹಿತಿ ಇಲ್ಲದೆ ವದಂತಿಗಳು ಪ್ರಚಾರವಾಗುತ್ತಿದ್ದರೆ ಉದ್ಯೋಗಿಗಳು ಅವಮಾನಗಳನ್ನು ಅನುಭವಿಸುತ್ತಾರೆ. ಇದು ಅನಾರೋಗ್ಯಕರವಾದ ಕೆಲಸದ ಪರಿಸರವನ್ನು ಸೃಷ್ಟಿಸುತ್ತದೆ ಮತ್ತು ಉದ್ಯೋಗಿಗಳು ಕೆಲಸವನ್ನು ಬಿಡಲು ಬಯಸುತ್ತಾರೆ.

ಇದೇ ರೀತಿಯಲ್ಲಿ, ಸಭಾ ಸಮುದಾಯದಲ್ಲಿ ವಿಶ್ವಾಸಿಗಳು ಹರಟೆಯಲ್ಲಿ, ಹಿಂದೆ ದೂರುವುದು, ಚಾಡಿ ಹೇಳುವುದು, ಕಟ್ಟುಕಥೆ ಹೇಳುವುದು, ಇವುಗಳಲ್ಲಿ ತೊಡಗಿಸಿಕೊಂಡರೆ, ಜನರುಗಳು ಅಂತಹ ಸಮುದಾಯ ಭಾಗವಾಗಿರಲೂ ಇಷ್ಟ ಪಡದ್ದಂತಹದ್ದಕ್ಕೆ ಇದು ಕಾರಣವಾಗುತ್ತದೆ ಮತ್ತು ಅವರು ಸಭೆಯಿಂದ ಮಧ್ಯದಲ್ಲೇ ಬಿಟ್ಟು ಹೋಗುತ್ತಾರೆ ಅಥವಾ ಬಿಟ್ಟುಬಿಡುತ್ತಾರೆ.

ಹರಟೆಯ ಮೂಲಕವಾಗಿ ವ್ಯಕ್ತಿಗಳನ್ನು, ವ್ಯಕ್ತಿಗತವಾಗಿ ಅಥವಾ ಆನ್‌ಲೈನ್ ಮುಖಾಂತರವಾಗಿ ಅವಮಾನಗೊಳಿಸುವಂತದ್ದು ಉದ್ದೇಶ ಪೂರ್ವಕವಾಗಿ ಒಬ್ಬರ ವೈಯಕ್ತಿಕ ಗೌರವವನ್ನು ಹಾಳು ಮಾಡುತ್ತದೆ. ಜನರು, ಅವರ ಗೌರವ ಮತ್ತು ಪ್ರತಿಷ್ಟೆಯನ್ನು ಕಳೆದುಕೊಳ್ಳುತ್ತಾರೆ ಮತ್ತು ಕಟುವಾದ ಹರಟೆ ಮತ್ತು ಚಾಡಿಯ ಕ್ರಿಯೆಯ ಮೂಲಕವಾಗಿ ಅಧಿಕವಾದ ಭಾವನಾತ್ಮಕ ಆಘಾತಗಳಿಗೆ ಒಳಗಾಗುತ್ತಾರೆ.

ಹದಿಹರೆಯದ ಭಾವನೆಗಳ ಮೇಲೆ ಹರಟೆಯ ಗಂಭೀರವಾದ ಭಾವನಾತ್ಮಕ ಪರಿಣಾಮವನ್ನು ಪರಿಗಣಿಸಿರಿ. ಪ್ರಸಕ್ತವಾದ ಸಮಯಗಳಲ್ಲಿ ಹದಿಹರೆಯದವರು ಸ್ನೇಹಿತರಿಂದ ಅಥವಾ ಸಹಪಾಠಿಗಳಿಂದ ಸಾಮಾಜಿಕ ಮಾಧ್ಯಮಗಳ ಮೂಲಕವಾಗಿ

ಆನ್‌ಲೈನ್‌ನಲ್ಲಿ ''ಪೀಡಿಸಲ್ಪಟ್ಟಿದ್ದಾರೆ'' ಹರಟೆ ಮಾಡುವುದು ಮತ್ತು ಚಾಡಿಹೇಳುವುದರಲ್ಲಿ ಅವರುಗಳು ಆತ್ಮಹತ್ಯೆ ಮಾಡಿಕೊಳ್ಳುವಂತಹ ಸ್ಥಿತಿಗೂ ತಲುಪಿದ್ದಾರೆ. ಇದು ಕಿರುಕುಳ, ಬೆದರಿಕೆ, ಮುಜಗರ ಅಥವಾ ಇನ್ನೊಬ್ಬ ವ್ಯಕ್ತಿಯನ್ನು ಗುರಿಯನ್ನಾಗಿಸುವಂತಹದ್ದಕ್ಕಾಗಿ ಉಪಯೋಗಿಸುವಂತಹ ತಂತ್ರಜ್ಞಾನದ ಪದವಾದ ''ಸೈಬರ್‌ಬೆದರುಸುವಿಕೆ'' ರಚಿಸುವ ಕಡೆಗೆ ಇದು ನಡೆಸುತ್ತದೆ ಮತ್ತು ಇದು ಒಂದು ಗಂಭೀರವಾದ ವಿಷಯುವಾಗಿದೆ. [ಹದಿಹರೆಯದವರ ತಂದೆ ತಾಯಂದಿರಿಗೆ ಉಪಯುಕ್ತವಾದಂತಹ ಒಂದು ಸೈಟ್: http://cyberbullying.us/]

## ಹರಟೆ ಸಂಬಂಧಗಳನ್ನು ನಾಶಮಾಡುತ್ತದೆ.

ಹರಟೆ, ಚಾಡಿಹೇಳುವುದು ಮತ್ತು ಇತರರ ಬಗ್ಗೆ ಸುಳ್ಳು ಮಾಹಿತಿಗಳನ್ನು ಹಬ್ಬಿಸುವಂತದ್ದು ಸಂಬಂಧಗಳನ್ನು ಮುರಿದು ಹಾಕುವ ಫಲಿತಾಂಶವನ್ನು ನೀಡುತ್ತದೆ. ಜನರು ಕೇಳಿದ್ದಂತಹ ಸುಳ್ಳನ್ನು ಅವರು ನಂಬುವಾಗ ಅವರು ಗಾಯಗೊಳ್ಳುತ್ತಾರೆ. ಕೋಪದ ಭಾವನೆಗಳು ಮತ್ತು ಬದ್ಧ ದ್ವೇಷ ಉಂಟಾಗುತ್ತದೆ ಮತ್ತು ಸಂಬಂಧಗಳು ನಾಶವಾಗುತ್ತದೆ.

ಜ್ಞಾನೋಕ್ತಿಗಳು 16:28
**ತುಂಟನು ಜಗಳ ಬಿತ್ತುತ್ತಾನೆ; ಚಾಡಿಕೋರನು ಮಿತ್ರರನ್ನು ಅಗಲಿಸುತ್ತಾನೆ.**

ಜ್ಞಾನೋಕ್ತಿಗಳು 25:23 (ನ್ಯೂ ಲೀವಿಂಗ್ ಟ್ರಾನ್ಸ್‌ಲೇಷನ್)
**ನಿಶ್ಚಯವಾಗಿ ಉತ್ತರದ ಗಾಳಿಯು ಮಳೆಯನ್ನು ತರುವ ಹಾಗೆಯೇ ಹರಟೆಯ ನಾಲಿಗೆಯು ಕೋಪಕ್ಕೆ ಕಾರಣವಾಗುತ್ತದೆ.**

ಜ್ಞಾನೋಕ್ತಿಗಳು 26:20
**ಕಟ್ಟಿಗೆಯಿಲ್ಲದಿದ್ದರೆ ಬೆಂಕಿ ಆರುವುದು; ಚಾಡಿಕೋರನು ಇಲ್ಲದಿದ್ದರೆ ಜಗಳ ಶಮನವಾಗುವುದು.**

ಹರಟೆಯ ಚಿಕ್ಕದಾದ ಬೀಜವು ಉತ್ತಮವಾದ ಸ್ನೇಹಿತರನ್ನು ಅಪನಂಬಿಕೆ ಮತ್ತು ಜಗಳವನ್ನು ಬಿತ್ತಿದಂತೆ ಬೇರೆ ಮಾಡುವ ಫಲಿತಾಂಶ ನೀಡುತ್ತದೆ. ಸಂಬಂಧಗಳು ನಾಶವಾಗುತ್ತವೆ. ಹರಟೆಯು ತಪ್ಪು ಭಾವನೆಗಳು ಅನಾರೋಗ್ಯಕರ-ಭಾವನೆಗಳನ್ನು ಹೆಚ್ಚಿಸುತ್ತದೆ. ಜನರು ಬಲವಂತವಾಗಿ ಅಂಚಿನಲ್ಲಿ ನಿಲ್ಲುತ್ತಾರೆ. ಅವರು ವಿಭಾಗಗೊಳ್ಳುತ್ತಾರೆ. ಇದು ಕೆಲಸದ ಸ್ಥಳದ ವ್ಯವಸ್ಥೆಯಲ್ಲಿ ಅಥವಾ ಯಾವುದೇ

ಸಮುದಾಯದಲ್ಲಿ ಜರುಗಬಹುದು. ಶಾಂತಿಯನ್ನು ಮತ್ತು ಸಾಮರಸ್ಯವನ್ನು ಪಾಲಿಸಲೂ ಹರಟೆಯನ್ನು ನಿಲ್ಲಿಸುವುದು ಬಹಳ ಸೂಕ್ತ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

## ಪ್ರತಿಫಲನ

ಪ್ರ. 1. ನೀವು ಯೋಚಿಸುವಂತಹ ಹರಟೆಯ ಕೆಲವು ಇತರೆ ನಕಾರಾತ್ಮಕ ಪರಿಣಾಮಗಳೇನು?

ಪ್ರ. 2. ಜನರನ್ನು ಭಾವನಾತ್ಮಕವಾಗಿ ಹರಟೆಯು ತೊಂದರೆಪಡಿಸಿದ್ದಂತಹ, ನೀವು ಗಮನಿಸಿದ್ದಂತಹ ನಿಜ-ಜೀವಿತದ ಪರಿಸ್ಥಿತಿಗಳಿವೆಯಾ? ಅದರ ಫಲಿತಾಂಶಗಳೇನು?

ಪ್ರ. 3. ಹರಟೆಯು ಸಂಬಂಧಗಳನ್ನು ನಾಶಪಡಿಸಿದಂತಹ ನೀವು ಗಮನಿಸಿದಂತಹ ನಿಜ-ಜೀವಿತದ ಪರಿಸ್ಥಿತಿಗಳು ಇವೆಯಾ? ಅದರ ಫಲಿತಾಂಶವೇನು? ಜನರು ಸಮನ್ವಯಗೊಳಿಸಿಕೊಂಡಿದ್ದಾರಾ ಮತ್ತು ಹರಟೆಗೆ ಕೊನೆಯನ್ನು ತರಲು ಅವರು ಶಕ್ತರಾಗಿದ್ದಾರಾ? ಹೌದಾದರೆ, ಇದನ್ನು ಹೇಗೆ ಅವರು ಮಾಡಲೂ ಸಾಧ್ಯಕರವಾಯಿತು?

# 4

# ಹರಟೆ ವಿರುದ್ಧ ದೇವರ ಗಂಭೀರ ನಿಲುವು

ಹರಟೆ, ಹಿಂದೆ ದೂರುವುದು, ಚಾಡಿಹೇಳುವುದು, ಹಿಂದೆ-ತಿವಿಯುವುದು, ಕಟ್ಟುಕಥೆ ಹಬ್ಬಿಸುವುದು ಮುಂತಾದವುಗಳ ಕುರಿತು ದೇವರ ವಾಕ್ಯದಲ್ಲಿ ನಾವು ಈಗಾಗಲೇ ನೋಡಿದ್ದೇವೆ. ವಚನ ಭಾಗಗಳಲ್ಲಿ ಹರಟೆಯ ಕುರಿತು ದೇವರು ಮಾಡುವಂತಹ ಗಂಭೀರವಾಗಿ ಗದರಿಸುವಂತಹವುಗಳನ್ನು ಪರಿಗಣಿಸೋಣ.

ಆತನ ಜನರಿಗೆ ದೇವರು ಕೊಟ್ಟಂತಹ ದಶಾಜ್ಞೆಗಳಲ್ಲಿ ಒಂದು ಯಾವುದೆಂದರೆ:

ವಿಮೋಚನಾಕಾಂಡ 20:16
**ಮತ್ತೊಬ್ಬನ ಮೇಲೆ ಸುಳ್ಳು ಸಾಕ್ಷಿ ಹೇಳಬಾರದು.**

ಇದರ ಅರ್ಥವು ಸುಳ್ಳು ಮಾತಾಡುವುದಲ್ಲ, ನಿಮ್ಮ ನೆರೆಯವರ ಕುರಿತು ಸುಳ್ಳು ಮಾಹಿತಿಗಳನ್ನು ಅಥವಾ ತಪ್ಪಾಗಿ ಹೇಳಬಾರದು.

ಚಾಡಿಹೇಳುವುದರಲ್ಲಿ ನಿರತರಾಗಿರುವಂತಹ ಆತನ ಜನರನ್ನು ದೇವರು ಗದರಿಸುತ್ತಾನೆ ಮತ್ತು ವಿಷಯಗಳನ್ನು ಕ್ರಮದಲ್ಲಿರಿಸಲು ಮತ್ತು ತಿದ್ದುಪಡಿಯನ್ನು ತರಲೂ ಆತನು ಅದರಲ್ಲಿ ಹೆಜ್ಜೆಯನ್ನಿಡುತ್ತಾನೆಂದು ಎಚ್ಚರಿಸುತ್ತಾನೆ.

ಕೀರ್ತನೆಗಳು 50:19-21
**ನಿಮ್ಮ ಬಾಯನ್ನು ಕೇಡಿಗೆ ಒಪ್ಪಿಸುತ್ತೀರಿ ನಾಲಿಗೆಯು ಮೋಸವನ್ನು ನೇಯುತ್ತದೆ. ಸಹೋದರನನ್ನು ಕ್ಷುದ್ರ ಮಾಡುತ್ತಾ ಕೂತು ಕೊಳ್ಳುತ್ತೀರಿ. ಒಡಹುಟ್ಟಿದವರನ್ನು ದೂರುತ್ತೀರಿ. ನೀವು ಹೀಗೆ ಮಾಡಿದರೂ ನಾನು ಸುಮ್ಮನೆ ಇದ್ದುದರಿಂದ ದೇವರೂ ನಮ್ಮಂಥವನೇ ಎಂದು ನೆನೆಸಿಕೊಂಡಿರಿ ಈಗಲಾದರೋ ನಾನು ಎಲ್ಲವನ್ನು ನಿಮ್ಮ ಮುಂದೆ ವಿವರಿಸಿ ನಿಮ್ಮನ್ನು ಅಪರಾಧಿಗಳೆಂದು ಸ್ಥಾಪಿಸುವೆನು.**

ಸುಳ್ಳು ಸಾಕ್ಷಿ ಹೇಳುವವರಾಗಿರುವುದು, ಇತರ ಜನರುಗಳ ಬಗ್ಗೆ ಸುಳ್ಳು ಮಾತಾನಾಡುವುದು ಮತ್ತು ಸಹೋದರರ ಮಧ್ಯದಲ್ಲಿ ಭಿನ್ನಾಭಿಪ್ರಾಯ ತರುವಂತಹ ಸಂಗತಿಗಳು ದೇವರಿಗೆ ಅಸಹ್ಯಕರವಾಗಿವೆ.

ಜ್ಞಾನೋಕ್ತಿಗಳು 6:16-19

**ಯೆಹೋವನು ಹಗೆಮಾಡುವ ವಸ್ತುಗಳು ಆರು ಇವೆ ಹೌದು ಏಳು ಆತನಿಗೆ ಅಸಹ್ಯಗಳಾಗಿ ತೋರುತ್ತವೆ. ಯಾವವೆಂದರೆ ಹೆಮ್ಮೆಯ ಕಣ್ಣು, ಸುಳ್ಳಿನ ನಾಲಿಗೆ, ನಿರ್ದೋಷರಕ್ತವನ್ನು ಸುರಿಸುವ ಕೈ, ದುರಾಲೋಚನೆಗಳನ್ನು ಕಲ್ಪಿಸುವ ಹೃದಯ ಕೇಡು ಮಾಡಲು ತ್ವರೆಪಡುವ ಕಾಲು, ಅಸತ್ಯವಾಡುವ ಸುಳ್ಳುಸಾಕ್ಷಿ. ಒಡಹುಟ್ಟಿದವರಲ್ಲಿ ಜಗಳಗಳನ್ನು ಬಿತ್ತುವವನು ಈ ಏಳೇ.**

ನಾವು ಮೊದಲೇ ನೋಡಿದಂತೆ, ಭಿನ್ನಾಭಿಪ್ರಾಯ ಅಥವಾ ಜನರ ಮಧ್ಯದಲ್ಲಿ ಭಿನ್ನಾಭಿಪ್ರಾಯ ಅಥವಾ ಒಡಕನ್ನು ನಾವು ಬಿತ್ತುವಂತಹ ಮಾರ್ಗವೆಂದರೆ ಹರಟೆ ಮತ್ತು ಚಾಡಿಯ ಮೂಲಕವಾಗಿದೆ. ಇದನ್ನು ದೇವರು ದ್ವೇಷಿಸುತ್ತಾನೆ.

ಚಾಡಿಕೋರನು ಮೂರ್ಖನು ಎಂಬುದಾಗಿ ಕರೆಯಲ್ಪಡುತ್ತಾನೆ. ಹರಟೆಯು ನಿಜವಾಗಿಯೂ ತೊಡಗಿಸಿಕೊಂಡಂತಹ ಒಂದು ಮೂರ್ಖವಾದಂತಹ ವಿಷಯವಾಗಿದೆ.

ಜ್ಞಾನೋಕ್ತಿಗಳು 10:18

**ಹೊಟ್ಟೆಯಲ್ಲಿ ಹಗೆಯನ್ನಿಟ್ಟುಕೊಂಡವನು ಸುಳ್ಳುಗಾರ ಚಾಡಿಗಾರನು ಜ್ಞಾನಹೀನ**

ರೋಮಾಪುರದವರಿಗೆ 1:28-32 ಹರಟೆ ಮತ್ತು ಹಿಂದೆದೂರುವವನು ಕೊಲೆ, ಅನೈತಿಕತೆ ಮುಂತಾದಂತಹವರ ಪಟ್ಟಿಗೆ ಸೇರಿಸಲಾಗಿದೆ.

ರೋಮಾಪುರದವರಿಗೆ 1:28-32

**ಇದಲ್ಲದೆ ದೇವರ ಜ್ಞಾನವು ಅವರಿಗೆ ಇಷ್ಟವಿಲ್ಲದ್ದರಿಂದ ಅಲ್ಲಿನ ಕೃತ್ಯಗಳನ್ನು ನಡೆಯುವವರಾಗುವಂತೆ ದೇವರು ಅವರನ್ನು ಅನಿಷ್ಟಭಾವಕ್ಕೆ ಒಪ್ಪಿಸಿದನು. ಹೇಗೆಂದರೆ ಅವರು ಸಕಲ ವಿಧವಾದ ಅನ್ಯಾಯ ದುರ್ಮಾಗತನ ಲೋಲುಪ್ತಿ ದುಷ್ಟತ್ವಗಳಿಂದಲೂ ಹೊಟ್ಟೆಕಿಚ್ಚು ಕೊಲೆ ಜಗಳ ಮೋಸ ಹಗೆತನಗಳಿಂದಲೂ ತುಂಬಿದವರಾದರು. ಅವರು ಕಿವಿ ಊದುವವರೂ ಚಾಡಿಹೇಳುವವರೂ ದೇವರನ್ನು ದ್ವೇಷಿಸುವವರೂ ಸೊಕ್ಕಿನವರೂ ಅಹಂಕಾರಿಗಳೂ ಬಡಾಯಿಕೊಚ್ಚುವವರೂ ಕೇಡನ್ನು ಕಲ್ಪಿಸುವರೂ ತಂದೆ-ತಾಯಿಗಳ ಮಾತನ್ನು ಕೇಳದವರೂ ವಿವೇಕವಿಲ್ಲದವರೂ-ಮಾತಿಗೆ ತಪ್ಪುವವರೂ ಮಮತೆಯಿಲ್ಲದವರೂ ಕರುಣೆಯಿಲ್ಲದವರೂ ಆದರು. ಇಂಥವುಗಳನ್ನು ನಡಿಸುವವರು ಮರಣಕ್ಕೆ ಪಾತ್ರರಾಗಿದ್ದಾರೆಂಬ ದೇವ ವಿಧಿಯು ಅವರಿಗೆ ತಿಳಿದಿದ್ದರೂ ಅವರು ತಾವೇ ಅವುಗಳನ್ನು ಮಾಡುವುದಲ್ಲದೆ ಮಾಡುವವರನ್ನೂ ಅನುಮೋದಿಸುತ್ತಾರೆ.**

''ಇಂಥವುಗಳನ್ನು ನಡಿಸುವವರು ಮರಣಕ್ಕೆ ಪಾತ್ರರಾಗಿದ್ದಾರೆಂಬ'' ಎಚ್ಚರಿಕೆಯು ಹರಟೆ ಹೊಡೆಯುವವರು ಮತ್ತು ಹಿಂದೆ ದೂರುವವರು ಸಹ ಇದರಲ್ಲಿ ಸೇರಿವೆ. ಹರಟೆಯ ವಿರುದ್ಧವಾಗಿ ದೇವರು ತೆಗೆದುಕೊಳ್ಳುವಂತಹ ಗಂಭೀರ ನಿಲುವು ಆಗಿದೆ.

ಮೂಲಭೂತವಾಗಿ, ಹರಟೆ, ಹಿಂದೆನಿಂದಿಸುವುದು, ಚಾಡಿ, ಹಿಂದೆ-ತಿವಿಯುವುದು, ಕಟ್ಟುಕಥೆಕಟ್ಟುವುದು ಮುಂತಾದ ವಿಷಯಗಳಲ್ಲಿ ನಾವುಗಳು ತೊಡಗಿಸಿಕೊಳ್ಳಬಾರದು.

## ಪ್ರತಿಫಲನ

ಪ್ರ. ಸತ್ಯವೇದವು, ಹರಟೆ, ಹಿಂದೆದೂರುವುದು ಚಾಡಿ ಹೇಳುವುದು, ಹಿಂದೆ-ತಿವಿಯುವುದು ಮತ್ತು ಕಟ್ಟುಕಥೆ ಹೇಳುವಂತಹ ಪಾಪದ ಕುರಿತು ನಿಖರವಾಗಿರುವಾಗ, ಯಾಕೆ ವಿಶ್ವಾಸಿಗಳು ಇನ್ನೂ ಅದನ್ನು ಮಾಡುವುದರಲ್ಲಿ ಭಾಗವಹಿಸುತ್ತಾರೆ ಮತ್ತು ತೊಡಗಿಸಿಕೊಂಡಿದ್ದಾರೆ?

# 5

# ಹರಟೆಯನ್ನು ನೀವು ಹೇಗೆ ನಿರ್ವಹಿಸುತ್ತೀರಿ?

ಜನರುಗಳು ನಮ್ಮ ಸುತ್ತಲೂ, ಹರಟೆ, ಚಾಡಿ ಹೇಳುವುದು ಹಿಂದೆ-ದೂರುವುದು ಮತ್ತು ವದಂತಿ ಹಬ್ಬಿಸುವುದರಲ್ಲಿ ಪ್ರಾರಂಭಿಸುವಂತಹ ಪರಿಸ್ಥಿತಿಗಳಲ್ಲಿ ನಮ್ಮನ್ನು ಗುರ್ತಿಸಿಕೊಂಡರೆ, ನಾವು ಏನು ಮಾಡುತ್ತೇವೆ? ಅಂತಹ ಸಂಗತಿಗಳಿಗೆ ನಾವು ಬಲಿಯಾಗಿದ್ದರೆ ನಾವು ಏನು ಮಾಡುತ್ತೇವೆ? ನಮ್ಮ ಬಗ್ಗೆ ಹರಡಿದ ತಪ್ಪು ಮಾಹಿತಿಗಳು ಇತರೆ ಪರಿಣಾಮಗಳು, ಭಾವನಾತ್ಮಕ ನೋವು ಮತ್ತು ಅಪಖ್ಯಾತಿಯನ್ನು ನಿರ್ವಹಿಸುವುದು ಮತ್ತು ನಾವು ಹೇಗೆ ಪ್ರತಿಕ್ರಿಯೆ ತೋರಿಸುತ್ತೇವೆ?

## ಹರಟೆಯ ಮೇಲೇರಿ ಎದ್ದೇಳುವುದು

ಆರಂಭಿಸಲು, ನಮ್ಮಲ್ಲಿ ಪ್ರತಿಯೊಬ್ಬರು ವೈಯಕ್ತಿಕವಾಗಿ ನಿರ್ದಿಷ್ಟವಾದ ಆಯ್ಕೆ ಮಾಡುವುದು ಅವಶ್ಯಕ ಮತ್ತು ನಮ್ಮ ಶಿಸ್ತು ಕ್ರಮದ ಭಾಗವಾಗಿ ನಾವು ಅದರಲ್ಲಿ ತೊಡಗಿಸಿಕೊಳ್ಳುವುದಿಲ್ಲ ಅಥವಾ ಯಾವುದೇ ರೀತಿಯಲ್ಲಿ ಹರಟೆಯಲ್ಲಿ ಭಾಗವಹಿಸುವುದಿಲ್ಲ. ಅಂತಹ ಕೆಳಮಟ್ಟದ ಸಂಭಾಷಣೆ ಮತ್ತು ಕಾರ್ಯಗಳಲ್ಲಿ ನಾವು ಇಳಿಯುವುದಿಲ್ಲ. ಅನಪೇಕ್ಷಿತವಾಗಿ ನಾವುಗಳು ಹರಟೆಯನ್ನು ಮಾಡುವ ಜನರುಗಳಿರುವ ಪರಿಸ್ಥಿತಿಗಳು ಮತ್ತು ಸ್ಥಳಗಳಲ್ಲಿ ನಾವುಗಳು ಗುರುತಿಸಿಕೊಂಡಾಗಲೂ, ನಾವು ಅದರಲ್ಲಿ ಭಾಗವಹಿಸುವುದಿಲ್ಲ ಮತ್ತು ಹರಟೆಯಲ್ಲಿ ನಾವು ತೊಡಗಿಸಿಕೊಳ್ಳುವುದಿಲ್ಲ.

ಕೀರ್ತನೆಗಳು 34:13

**ಹಾಗಾದರೆ ಕೆಟ್ಟದ್ದಕ್ಕೆ ಹೋಗದಂತೆ ನಾಲಿಗೆಯನ್ನು ಕಾದುಕೋ ವಂಚನೆಯ ಮಾತುಗಳಿಗೆ ಬಿಡದೆ ತುಟಿಗಳನ್ನು ಇಟ್ಟುಕೋ.**

ಕೀರ್ತನೆಗಳು 39:1

**ನನ್ನ ನಾಲಿಗೆ ಪಾಪಕ್ಕೆ ಹೋಗದಂತೆ ಜಾಗರೂಕನಾಗಿರುವೆನು ದುಷ್ಟರು ನನ್ನ ಮುಂದೆ ಇರುವಾಗ ಬಾಯಿಗೆ ಕುಕ್ಕೆ ಹಾಕಿಕೊಂಡಿರುವೆನು ಅಂದುಕೊಂಡೆನು.**

ಕೀರ್ತನೆಗಳು 139:4
**ಯೆಹೋವನೇ ನನ್ನ ನಾಲಿಗೆಯ ಮಾತುಗಳಲ್ಲಿ ನೀನು ಅರಿಯದೆ ಇರುವಂಥದ್ದು ಒಂದೂ ಇಲ್ಲ.**

ನಾವು, ನಮ್ಮನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತೇವೆ ಮತ್ತು ದೇವರಿಗೆ ವಿರೋಧವಾಗಿ ಪಾಪವನ್ನು ತಿರಿಸ್ಕರಿಸುತ್ತೇವೆ. ನಾವು ಪಿಸುಮಾತು ಹೇಳಿದ್ದರು, ನಮ್ಮ ಹರಟೆ ಮಾತನ್ನು ದೇವರಿಂದ ಮುಚ್ಚಿಟ್ಟುಕೊಳ್ಳಲೂ ಸಾಧ್ಯವಿಲ್ಲ ಎಂಬುದು ನಮಗೆ ಗೊತ್ತಿದೆ.

ಯಾರೊಬ್ಬರು ಹಿಂದೆ ಯಾವುದನ್ನು ಹೇಳಬೇಡಿರಿ.ನೀವು ಅವರ ಮುಂದೆ ಅದನ್ನು ಹೇಳುವುದಿಲ್ಲ.

ಅವರ ಅನುಪಸ್ಥಿತಿಯಲ್ಲಿ ಏನಾದರನ್ನು ಹೇಗೆ ಹೇಳುತ್ತೀರಿ, ಅದು ಅವರ ಉಪಸ್ಥಿತಿಯಲ್ಲೂ ಅದನ್ನೇ ಹೇಳುವಂತದ್ದು ಆಗಿರಬೇಕು.

ನಿಮ್ಮ ಹೃದಯವನ್ನು ಶುದ್ಧವಾಗಿಟ್ಟುಕೊಳ್ಳಿರಿ ಮತ್ತು ಅಪರಾಧ ಅಥವಾ ಯಾರಾದರೊಬ್ಬರ ಕಡೆಗೆ ಕೆಟ್ಟ ಭಾವನೆಯಿಂದ ಸ್ವತಂತ್ರರಾಗಿರಿ. ಉದ್ದೇಶವೂ ಯಾವಾಗಲೂ ಪ್ರೀತಿಯಲ್ಲಿ ನಡೆಯುವಂತದ್ದಾಗಿರಲಿ. ಈ ರೀತಿಯಾಗಿ ಜನರನ್ನು ಕೀಳಾಗಿಸುವುದು, ತೊಂದರೆ ಪಡಿಸುವುದು ಅಥವಾ ಅವರನ್ನು ನಾಶಪಡಿಸಲೂ ಕೆಟ್ಟದ್ದನ್ನು ಮಾತಾನಾಡುವುದಿಲ್ಲ.

ಮತ್ತಾಯ 15:19
**ಹೇಗೆಂದರೆ ಮನಸ್ಸಿನೊಳಗಿಂದ ಕೆಟ್ಟ ಆಲೋಚನೆ, ಕೊಲೆ, ಹಾದರ, ಸೂಳೆಗಾರಿಕೆ, ಕಳ್ಳತನ, ಸುಳ್ಳುಸಾಕ್ಷಿ, ಬೈಗಳು ಹೊರಟು ಬರುತ್ತವೆ.**

ರೋಮಾಪುರದವರಿಗೆ 13:9
**ಹೇಗೆಂದರೆ ವ್ಯಭಿಚಾರ ಮಾಡಬಾರದು, ನರಹತ್ಯೆ ಮಾಡಬಾರು ಕದಿಯಬಾರದು ಪರರ ಸೊತ್ತನ್ನು ಆಶಿಸಬಾರದು ಈ ಮೊದಲಾದ ಎಲ್ಲಾ ಕಟ್ಟಳೆಗಳು ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬ ಒಂದೇ ಮಾತಿನಲ್ಲಿ ಅಡಕವಾಗಿದೆ.**

ಪ್ರತಿಕಾರವನ್ನು ತಿರಸ್ಕರಿಸಿರಿ. ಹರಟೆ ಹಬ್ಬಿಸಿರುವುದರಿಂದ ಹರಟೆಯ ಮೇಲೆ ನೀವು ಗೆಲ್ಲಲೂ ಸಾಧ್ಯವಿಲ್ಲ.

## ಸಾಧ್ಯವಾದರೆ, ಪ್ರೀತಿಯಿಂದ ಎದುರಿಸಿರಿ

ಸಾಧ್ಯಕರವಾಗಿರುವಲ್ಲಿ, ಹರಟೆಯಲ್ಲಿ ತೊಡಗಿಸಿಕೊಂಡಿರುವ ಜನರು ಅಥವಾ ತಪ್ಪು ಮಾಹಿತಿ ಮತ್ತು ವದಂತಿ ಹಬ್ಬಿಸಲು ಪ್ರಾರಂಭಿಸಿರುವ ವ್ಯಕ್ತಿಯೊಡನೆ ವಿಚಾರಗಳನ್ನು ಪರಾಂಭರಿಸಿರಿ. ಹರಟೆಯಲ್ಲಿ ಹಬ್ಬಿಸಿರುವುದರ ಮೂಲಕವಾಗಿ ಜರುಗಿರುವಂತಹ ತೊಂದರೆಯನ್ನು ಅವರು ನೋಡಲೂ ಪ್ರೀತಿಯಿಂದ ಅವರಿಗೆ ಸಹಾಯ ಮಾಡಿಸಿರಿ ಇದರ ಮೇಲೆ ಎದ್ದೇಳಲೂ ಅವರಿಗೆ ಪ್ರೋತ್ಸಾಹಿಸಿರಿ ಮತ್ತು ವಿಚಾರದ ಬಗ್ಗೆ ಹರಟೆ ಮಾಡದೇ ನೇರವಾಗಿ ವ್ಯಕ್ತಿಯೊಡನೆ ತೊಡಗಿಸಿಕೊಂಡು ನಿಜವಾದ ವಿವಾದಗಳನ್ನು ಪರಾಂಭರಿಸಿರಿ.

## ಇದು ಸಾಯಲಿ

ಹರಟೆಯನ್ನು ಹಬ್ಬಿಸಬೇಡಿರಿ. ಹರಟೆಯು ಸಾಯಲೂ ಅವಕಾಶ ನೀಡಿರಿ. ಅಂತಹ ಪರಿಸ್ಥಿತಿಗಳಲ್ಲಿ ಚಿಕ್ಕದಾಗಿ ಹೇಳಿದ್ದು ಉತ್ತಮವಾಗಿರುತ್ತದೆ. ಅಧಿಕವಾದ ಜನರು ಅದರಲ್ಲಿ ಭಾಗವಹಿಸಲು ತಿರಸ್ಕರಿಸುವಾಗ ಕಥೆಯು ಅಂತಿಮವಾಗಿ ಸತ್ತು ಹೋಗುತ್ತದೆ.

ಸಾಧ್ಯವಾಗುವಾಗ, ವೈಯಕ್ತಿಕ ಅಥವಾ ಪರಿಸ್ಥಿತಿಯ ಕುರಿತು ಸಕಾರಾತ್ಮಕ ವಿಷಯಗಳನ್ನು ಮಾತಾಡುವುದುರಿಂದ, ಹರಟೆಗೆ ವ್ಯತಿರಿಕ್ತವಾಗಿ ಕಾರ್ಯ ಮಾಡುವುದನ್ನು ಆರಿಸಿಕೊಳ್ಳಿರಿ ಸಂಗತಿಗಳು ಉತ್ತಮವಾದ ರೀತಿಯಲ್ಲಿ ಕಾಣಲೂ ಜನರಿಗೆ ಸಹಾಯ ಮಾಡಿರಿ. ಹರಟೆ ಮತ್ತು ವದಂತಿಗಳು ಅರ್ಧ ಸತ್ಯ, ಅಪರಿಪೂರ್ಣವಾದ ಮಾಹಿತಿಗಳು ಅಥವಾ ತಪ್ಪು ಮಾಹಿತಿಗಳ ಮೇಲೆ ಕೇಂದ್ರಿಕೃತವಾಗುವಂತಹವುಗಳಾಗಿದೆ. ಆದ್ದರಿಂದ ಉತ್ತಮವಾದಂತವುಗಳ ಕಡೆಗೆ ಮಾತಾಡುವುದರಿಂದ ಹರಡುತ್ತಿರುವ ಅರ್ಧ ಸತ್ಯಗಳನ್ನು ನಾವು ಪ್ರತಿರೋಧಿಸುತ್ತೇವೆ.

## ಪ್ರಾರ್ಥಿಸಿರಿ, ಕ್ಷಮಿಸಿರಿ ಮತ್ತು ಬಿಡುಗಡೆಗೊಳಿಸಿರಿ

ಹರಟೆ ಮತ್ತು ಚಾಡಿಹೇಳುವುದಕ್ಕೆ ನೀವು ಬಲಿಯಾಗಿರುವುದಾದರೆ ಪ್ರಾರ್ಥಿಸಿರಿ, ಕರ್ತನು ನಿಮ್ಮ ರಕ್ಷಣಾ ಕಾರ್ಯಕ್ಕೆ ಬರುತ್ತಾನೆ.

ಕೀರ್ತನೆಗಳು 31:13-16

**ಅನೇಕರು ನನ್ನ ಪ್ರಾಣ ತೆಗೆಯಬೇಕೆಂದು ಒಳಸಂಚು ಮಾಡುತ್ತಿದ್ದಾರೆ. ಅವರ ಪಿಸುಗುಟ್ಟುವ ಮಾತುಗಳು ನನ್ನ ಕಿವಿಗೆ ಬಿದ್ದಿವೆ. ಎಲ್ಲಾ ಕಡೆಯಲ್ಲಿಯೂ ನನಗೆ ಭೀತಿಯುಂಟಾಗಿದೆ. ನಾನಾದರೋ ಯೆಹೋವನೇ ನಿನ್ನಲ್ಲೇ ಭರವಸೆಯಿಟ್ಟಿದ್ದೇನೆ; ನೀನೇ ನನ್ನ ದೇವರೆಂದು ಹೇಳಿಕೊಂಡಿದ್ದೇನೆ. ನನ್ನ ಆಯುಷ್ಕಾಲವು ನಿನ್ನ ಕೈಯಲ್ಲಿದೆ, ಹಿಂದಟ್ಟುವ ಶತ್ರುಗಳಿಗೆ ನನ್ನನ್ನು ತಪ್ಪಿಸಿ ಕಾಪಾಡು ನಿನ್ನ ಸೇವಕನನ್ನು ಪ್ರಸನ್ನ ಮುಖದಿಂದ ನೋಡು ಪ್ರೀತಿಯಿಂದ ನನ್ನನ್ನು ರಕ್ಷಿಸು.**

ನಿಮ್ಮ ಕುರಿತು ಜನರುಗಳು ಹರಟೆಯನ್ನು ಮತ್ತು ವದಂತಿಗಳನ್ನು ಹಬ್ಬಿಸುವಾಗ ಇದು ಗಾಯ ಮಾಡುತ್ತಿದೆ, ಇದು ಬಹಳ ನೋವುಂಟು ಮಾಡುತ್ತದೆ ನಿಮ್ಮ ನೋವು ಮತ್ತು ಗಾಯದ ಭಾವನೆಗಳನ್ನು ಪ್ರಾರ್ಥನೆಯಲ್ಲಿ ದೇವರಿಗೆ ಬಿಡುಗಡೆಮಾಡಿರಿ. ವಿಚಾರಗಳ ಕುರಿತು ದೇವರೊಂದಿಗೆ ಮಾತಾಡಿರಿ ನಿಮ್ಮ ಹೃದಯದಲ್ಲಿರುವವುಗಳು ಮತ್ತು ಭಾವನೆಗಳನ್ನು ಆತನಿಗೆ ಕೊಡಿರಿ.

ಇದನ್ನು ಮಾಡುತ್ತಿರುವಂತಹವರ ಕಡೆಗೆ ಕ್ಷಮಾಪಣೆ ಬಿಡುಗಡೆ ಮಾಡಿರಿ. ಅವರು ಮಾಡುತ್ತಿರುವಂತಹದರ ಮಧ್ಯದಲ್ಲಿ ಅವರನ್ನು ಪ್ರೀತಿಸಿರಿ. ಅವರು ಮಾಡುತ್ತಿರುವಂತಹವುಗಳ ಹಿಂದೆ ಸೇಡು, ವಿಶ್ವಾಸಘಾತ ಮತ್ತು ಇತರೆ ತಪ್ಪಾದ ಪ್ರೇರಣೆಗಳಿರಬಹುದು. ಆದರೆ ಇನ್ನೂ ಸಹ ನೀವು ಅವರನ್ನು ದೇವರ ಪ್ರೀತಿಯೊಡನೆ ಅವರನ್ನು ಪ್ರೀತಿಸಿರಿ. ಅವರನ್ನು ಕ್ಷಮಿಸಿರಿ ಮತ್ತು ಬಿಡುಗಡೆಗೊಳಿಸುವ ಆಯ್ಕೆ ಮಾಡಿರಿ ಮತ್ತು ನಿಮ್ಮ ಸಂರಕ್ಷಣಾ ಮತ್ತು ಸಮರ್ಥನೆಗಾಗಿ ದೇವರನ್ನು ನೋಡಿರಿ. *''ಕೇಳುವವರಾದ ನಿಮಗೆ ನಾನು ಹೇಳುವುದೇನೆಂದರೆ ನಿಮ್ಮ ವೈರಿಗಳನ್ನು ಪ್ರೀತಿಸಿರಿ ನಿಮ್ಮನ್ನು ಹಗೆಮಾಡುವವರಿಗೆ ಉಪಕಾರ ಮಾಡಿರಿ ನಿಮ್ಮನ್ನು ಶಪಿಸುವವರಿಗೆ ಆಶೀರ್ವಾದ ಮಾಡಿರಿ ನಿಮ್ಮನ್ನು ಬಯ್ಯುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ.''* (ಲೂಕ 6:27, 28)

## ನಮ್ಮ ಸಮುದಾಯವನ್ನು ಒಂದು ಹರಟೆ-ಮುಕ್ತ-ವಲಯವನ್ನಾಗಿ ನಾವು ಮಾಡೋಣ

ಹರಟೆ, ಹಿಂದೆದೂರುವುದು, ಚಾಡಿ, ಹಿಂದೆ-ತಿವಿತ, ಕಟ್ಟು ಕಥೆ ಹೇಳುವುದು ಮುಂತಾದವುದಗಳಿಗೆ ಶೂನ್ಯವಾದ ಸಹನೆಯನ್ನು ಹೊಂದಿರುವ ಸಮುದಾಯದ ಜನರು ನಾವಾಗಿರೋಣ. ಹರಟೆ, ಹಿಂದೆ ದೂರುವುದು ಚಾಡಿ, ಹಿಂದೆ-ತಿವಿಯುವುದು, ಕಟ್ಟುಕಥೆ ಹೇಳುವುದು ನಮ್ಮ ಮಧ್ಯದಲ್ಲಿ ಅಸ್ತಿತ್ವದಲ್ಲಿರುವುದಿಲ್ಲ! ದೇವರ ಸುಂದರವಾದ ತೋಟ,

ಸಭೆಯನ್ನು ತೊಂದರೆಗೊಳಿಸುವ ಮತ್ತು ಅಡಚಣೆಗೊಳಿಸುವ ಕಳೆಯು ಹರಟೆಯಾಗಿದೆ. ಆತನ ತೋಟವನ್ನು ಕಳೆ-ರಹಿತವಾಗಿ ಇರಿಸುವ ಸ್ವಯಂ-ಶಿಸ್ತು ಅಭಿವೃದ್ಧಿಪಡಿಸೋಣ ಮತ್ತು ಒಂದು ಸಂಸ್ಕೃತಿಯನ್ನು ಸೃಷ್ಟಿಸೋಣ.

## ಪ್ರತಿಫಲನ

ಪ್ರ. ನೀವು ಪ್ರಸಕ್ತವಾಗಿ ಎದುರಿಸುತ್ತಿರುವಂತಹ ಹರಟೆ, ಚಾಡಿ, ಹಿಂದೆ-ದೂರುವುದರಿಂದ ನೀವು ಹೊರಬರಲು ಅಪೇಕ್ಷಿಸುವಂತಹ ನಿರ್ದಿಷ್ಟ ಪರಿಸ್ಥಿತಿಗಳು ಇವೆಯಾ? ನಿಮ್ಮ ಪರಿಸ್ಥಿತಿಗಳನ್ನು ಜಯಿಸಲು ನಿರ್ದಿಷ್ಟವಾಗಿ ಮಾಡಬೇಕಾದಂತಹ ಕೆಲವು ವಿಷಯಗಳೇನು?

# 6

# ಪ್ರಾರ್ಥನೆ

## ಪಶ್ಚಾತ್ತಾಪ ಮತ್ತು ಅರಿಕೆಯ ಪ್ರಾರ್ಥನೆ

*ಪರಲೋಕದಲ್ಲಿರುವ ಪ್ರೀತಿಯ ತಂದೆಯೇ, ನನ್ನ ಮಾತಿನ ಕುರಿತು ನಾನು ಜಾಗರೂಕನಾಗಿರದೇ ಇದ್ದದ್ದಕ್ಕಾಗಿ ನಾನು ಅರಿಕೆ ಮಾಡುತ್ತೇನೆ. ನಾನು ಗೊತ್ತಿದ್ದು ಮತ್ತು ಕೆಲವು ಸಮಯಗಳಲ್ಲಿ ಗೊತ್ತಿಲ್ಲದೆ ಹರಟೆ ಮಾತಾಡಿದ್ದೇನೆ, ಚಾಡಿ ಹೇಳಿದ್ದೇನೆ ಮತ್ತು ಇತರರ ಬಗ್ಗೆ ಕೆಟ್ಟದ್ದಾಗಿ ಮಾತಾಡಿದ್ದೇನೆ. ನಾನು ವದಂತಿಗಳನ್ನು ಹಬ್ಬಿಸುವುದರಲ್ಲಿ ಮತ್ತು ಜನರುಗಳ ಗೌರವವನ್ನು ಹಾಳು ಮಾಡುವುದರಲ್ಲಿ ತಪ್ಪಿತಸ್ಥನಾಗಿದ್ದೇನೆ. ನಾನು ಮಾಡಿದಂತಹ ತಪ್ಪುಗಳಿಗಾಗಿ ಪಶ್ಚಾತ್ತಾಪ ಪಡುತ್ತೇನೆ ಮತ್ತು ದಯವಿಟ್ಟು ನನ್ನನ್ನು ಕ್ಷಮಿಸು ಎಂಬುದಾಗಿ ಕೇಳುತ್ತೇನೆ ಮತ್ತು ಯೇಸುಕ್ರಿಸ್ತನ ಪವಿತ್ರ ರಕ್ತದಿಂದ ನನ್ನ ಪಾಪಗಳನ್ನು ತೊಳೆದುಬಿಡು. ನಾನು ಹರಟೆಯ ಜೀವನ ಶೈಲಿಯನ್ನು ತ್ಯಜಿಸುತ್ತೇನೆ. ಜೊತೆಗೆ ನನ್ನ ನಾಲಿಗೆಯ ಮೇಲೆ ದಯವಿಟ್ಟು ಕಾವಲಿರಿಸು ಆದ್ದರಿಂದ ನಾನು ಹರಟೆ, ಚಾಡಿ ಮತ್ತು ಇತರರ ಬಗ್ಗೆ ಕೆಟ್ಟದಾಗಿ ಮಾತಾನಾಡುವುದರಲ್ಲಿ ಮುಂದುವರೆಯುವುದಿಲ್ಲ. ಇದನ್ನು ಮಾಡಿದ್ದಕ್ಕಾಗಿ ನಾನು ವಂದಿಸುತ್ತೇನೆ. ಯೇಸುವಿನ ನಾಮದಲ್ಲಿ. ಆಮೆನ್.*

## ಹಳೆಗಾಲದಲ್ಲಿ ಹರಟೆಯಿಂದ ಗಾಯಗೊಂಡಿರುವಂತವರಿಗಾಗಿ ಪ್ರಾರ್ಥನೆ

*ಪ್ರೀತಿಯ ತಂದೆಯೇ, ನನ್ನ ಹೃದಯವನ್ನು ನಿನಗೆ ಸುರಿಸುತ್ತೇನೆ ಯಾಕೆಂದರೆ ನೀನು ನನ್ನನ್ನು ಪ್ರೀತಿಸುತ್ತಿ ಮತ್ತು ಕಾಳಜಿ ವಹಿಸುತ್ತಿ. ನನ್ನ ಆಂತರಿಕ ಆಲೋಚನೆಗಳು ಮತ್ತು ಭಾವನೆಗಳು ನಿನಗೆ ಗೊತ್ತಿದೆ. ನಾನು ಗಾಯಗೊಂಡಿದ್ದೇನೆ ಮತ್ತು ನನ್ನ ಕುರಿತು [ಜನರು ಅಥವಾ ಪರಿಸ್ಥಿತಿಯ ಹೆಸರು] ಇವರಿಂದ ಹರಡಲ್ಪಟ್ಟಂತಹ ವದಂತಿಗಳು, ಚಾಡಿಗಳು, ಮತ್ತು ಹರಟೆಯ ನಿಮಿತ್ತ ನೋವುಂಟಾಗಿದೆ. ನನ್ನ ಗಾಯ ಮತ್ತು ಭಾವನೆಗಳನ್ನು ನಿನ್ನ ಬಳಿಗೆ ತರುತ್ತೇನೆ ಮತ್ತು ನನ್ನ ನೋವು, ನನ್ನನ್ನು ಸ್ವಸ್ಥ ಮಾಡು ಎಂಬುದಾಗಿ ಕೇಳಿಕೊಳ್ಳುತ್ತೇನೆ. ಓ ಕರ್ತನೇ, ನನ್ನ ಭಾವನೆಗಳನ್ನು ಮತ್ತು ನೆನಪುಗಳನ್ನು ಸ್ವಸ್ಥಗೊಳಿಸು. ಪವಿತ್ರಾತ್ಮನ ಸಾಮರ್ಥ್ಯದೊಡನೆ ಮತ್ತು ಪ್ರೀತಿಸಲು*

ಆತನು ಕೊಡುವ ಬಲದಿಂದ, ನನಗೆ ನೋವುಂಟು ಮಾಡಿದವರಿಗೆ ಕ್ಷಮಾಪಣೆಯನ್ನು ನಾನು ಬಿಡುಗಡೆಗೊಳಿಸುತ್ತೇನೆ. ನನ್ನ ಹೃದಯಕ್ಕೆ ಸುರಿಸಲ್ಪಟ್ಟಂತಹ ದೇವರ ಪ್ರೀತಿಯನ್ನು ಅವರಿಗೆ ನಾನು ಬಿಡುಗಡೆಗೊಳಿಸುತ್ತೇನೆ. ನನ್ನ ಪರವಾಗಿ ದೈವಿಕ ಮಧ್ಯಸ್ಥಿಕೆಯನ್ನು ವಹಿಸು ಎಂಬುದಾಗಿ ನಾನು ಕೇಳಿಕೊಳ್ಳುತ್ತೇನೆ ಮತ್ತು ನನ್ನ ಜೀವಿತವು ಇಂತಹ ವದಂತಿಗಳು, ಹರಟೆ ಮತ್ತು ಚಾಡಿಯಿಂದ ಹಾನಿಗೊಳಗಾಗಿದ್ದರೆ ಅವುಗಳಿಂದ ನನ್ನನ್ನು ಬಿಡುಗಡೆಗೊಳಿಸು ನಿಮ್ಮ ದಯೆ ಮತ್ತು ಗೌರವದೊಡನೆ ನನ್ನ ಜೀವಿತಕ್ಕೆ ಕೃಪೆತೋರಿಸು. ನಿನ್ನ ಕೈ ನನ್ನನ್ನು ಎತ್ತಿಹಿಡಿಯಲಿ. ಓ ಕರ್ತನೇ, ನೀನು ನನ್ನ ಮಹಿಮೆಯಾಗಿದ್ದೀ ಮತ್ತು ನನ್ನ ತಲೆಯನ್ನು ಮೇಲೆತ್ತುವಂತೆ ಮಾಡುತ್ತೀ ಕರ್ತನೇ, ನಾನು ನಿನ್ನನ್ನು ನೋಡುತ್ತೇನೆ ಮತ್ತು ನನ್ನ ಕಣ್ಣುಗಳು ನಿನ್ನ ಮೇಲೆ ಮಾತ್ರ ಇವೆ. ನನ್ನ ಜೀವಿತದಲ್ಲಿ ನಿಮ್ಮ ಕೆಲಸಕ್ಕಾಗಿ ವಂದನೆ ತಂದೆಯೇ, ಯೇಸುವಿನ ನಾಮದಲ್ಲಿ. ಆಮೆನ್.

## ಹರಟೆಯು ಜರುಗುತ್ತಿರುವಂತಹದರ ಮಧ್ಯದಲ್ಲಿರುವಂತವರಿಗಾಗಿ ಪ್ರಾರ್ಥನೆ

*ಪ್ರೀತಿಯ ತಂದೆಯೇ, ನನ್ನ ಹೃದಯವನ್ನು ನಿನಗೆ ಸುರಿಸುತ್ತೇನೆ ಯಾಕೆಂದರೆ ನೀನು ನನ್ನನ್ನು ಪ್ರೀತಿಸುತ್ತೀಯಾ ಮತ್ತು ಕಾಳಜಿ ವಹಿಸುತ್ತೀಯಾ ನನ್ನ ಅಂತರಾಳದ ಆಲೋಚನೆಗಳು ಮತ್ತು ಭಾವನೆಗಳು ನಿನಗೆ ಗೊತ್ತಿದೆ. ನನ್ನ ಬಗ್ಗೆ ಇವರಿಂದ [ಜನರ ಹೆಸರು ಅಥವಾ ಪರಿಸ್ಥಿತಿ] ಹರಡಲ್ಪಟ್ಟಂತಹ ವದಂತಿಗಳು, ಚಾಡಿಗಳು ಮತ್ತು ಹರಟೆಗಳ ನಿಮಿತ್ತದಿಂದ ನನಗುಂಟಾದ ನೋವು ಮತ್ತು ಗಾಯವು ನಿನಗೆ ಗೊತ್ತಿದೆ. ನನ್ನ ನೋವು ಮತ್ತು ಭಾವನೆಗಳನ್ನು ನಿನ್ನ ಬಳಿಗೆ ತರುತ್ತೇನೆ ಮತ್ತು ನನ್ನ ನೋವಿನಿಂದ ನನ್ನನ್ನು ನೀನು ಸ್ವಸ್ಥಗೊಳಿಸು. ಪವಿತ್ರಾತ್ಮನ ಸಾಮರ್ಥ್ಯದೊಡನೆ ಮತ್ತು ಆತನು ಪ್ರೀತಿಸಲು ಬಲ ಕೊಡುತ್ತಾನೆ. ನನಗೆ ನೋವುಂಟು ಮಾಡಿದವರಿಗೆ ಕ್ಷಮಾಪಣೆಯನ್ನು ನಾನು ಬಿಡುಗಡೆ ಮಾಡುತ್ತೇನೆ. ನನ್ನ ಹೃದಯಕ್ಕೆ ಸುರಿಸಲ್ಪಟ್ಟಂತಹ ದೇವರ ಪ್ರೀತಿಯನ್ನು ನಾನು ಅವರಿಗೆ ಬಿಡುಗಡೆಗೊಳಿಸುತ್ತೇನೆ. ನನಗೋಸ್ಕರವಾಗಿ ನೀನು ದೈವಿಕ ಮಧ್ಯಸ್ಥಿಕೆ ವಹಿಸು ಎಂಬುದಾಗಿ ಕೇಳಿಕೊಳ್ಳುತ್ತೇನೆ ಮತ್ತು ನಿಮ್ಮ ದಯೆಯೊಡನೆ ನನ್ನನ್ನು ಆವರಿಸಿಕೋ ಮತ್ತು ಇಂತಹ ವದಂತಿಗಳು ಹರಟೆ ಮತ್ತು ಚಾಡಿಯನ್ನು ತೆಗೆದುಹಾಕು. ನನ್ನ ಜೀವಿತದ ಮೇಲೆ ಗೌರವವನ್ನು ಇಡು ಮತ್ತು ನಿಮ್ಮ ಹಸ್ತವು ನನ್ನನ್ನು ಮೇಲಕ್ಕೆ ಎತ್ತಲಿ, ನಾನು ನಿನ್ನನ್ನು ನೋಡುತ್ತೇನೆ ಮತ್ತು ನನ್ನ ಕಣ್ಣುಗಳು ನಿನ್ನ ಮೇಲೆ ಮಾತ್ರವೇ ಇದೆ. ನನ್ನ ಜೀವಿತದಲ್ಲಿ ನಿಮ್ಮ ಕಾರ್ಯಗಳಿಗಾಗಿ ವಂದನೆ ತಂದೆಯೇ, ಯೇಸುವಿನ ನಾಮದಲ್ಲಿ. ಆಮೆನ್*

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಬೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., No.5
M.G. Road, Bangalore, Karnataka 560 001

ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚಿನ ವಿವರಗಳಿಗಾಗಿ apcwo.org/give ನ್ನು ದಯವಿಟ್ಟು ಸಂಪರ್ಕಿಸಿರಿ.

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!

ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ
ದೇವರ ಮನೆ
ದೈವಿಕ ದಯೆ
ಶ್! ಹರಟೆ ಬೇಡ
ದೈವಿಕ ಕ್ರಮ (ನಗರವ್ಯಾಪ್ತಿ ಸಭೆಗಳಲ್ಲಿ)

## ಉಚಿತ ಇ-ಪುಸ್ತಕಗಳು

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

## ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು

'ಲಿವಿಂಗ್ ಸ್ಪ್ರಾಂಗ್ ಎಂಬ ಗಾಡ್ ಟಿವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

## ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅಧ್ಬುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ಧೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಆಲ್‌ಪೀಪಲ್ಸ್ ಸಭೆಯು ಭಾರತದಲ್ಲಿ ಅನೇಕ ಸಭೆಗಳನ್ನು ಹೊಂದಿದೆ ಮತ್ತು ಹೊಸ ಸಭೆಗಳು ನಿಯತಕಾಲಿಕವಾಗಿ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್‌ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು "ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ" ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು"** (ಅಪೊಸ್ತಲರ ಕೃತ್ಯ 10:43)

**"ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ"** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, "ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ" ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ಟಿಪ್ಪಣಿಗಳು

## DOWNLOAD THE FREE APP!

*Search for*

**"All Peoples Church Bangalore"**
**in the App or Google play stores.**

Available on the App Store

ANDROID APP ON Google play




*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

# ಆಲ್ ಪೀಪಲ್ಸ್ ಚರ್ಚ್
# ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC-BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಶಾಸ್ತ್ರೀಕರಣವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಂದಿಗೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು - ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿಸುವುದನ್ನು ನಾವು ನಂಬುತ್ತೇವೆ.

ಎ.ಪಿ.ಸಿ-ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನ್ನು ನೀಡುತ್ತೇವೆ:

ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
ಎರಡು ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (D.Th.)
ಮೂರು ವರ್ಷದ ಬ್ಯಾಚುಲರ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ ಸೋಮವಾರದಿಂದ ಶುಕ್ರವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1ರವರೆಗೆ ಜರುಗುತ್ತದೆ. ದಿನದ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು ಮತ್ತು ಮನೆಯಲ್ಲಿ ಇರುವವರು ಇಂತಹ ತರಗತಿಗಳಿಗೆ ಹಾಜರಾಗಬಹುದು ಮತ್ತು ಮಧ್ಯಾಹ್ನ 1 ರ ನಂತರ ಅವರ ಕೆಲಸಗಳನ್ನು ಮುಂದುವರೆಸಬಹುದು.

ವಸತಿನಿಲಯ: ಇಚ್ಛಿಸುವಂತಹ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ದೊರೆಯುತ್ತದೆ. ವಿದ್ಯಾರ್ಥಿಗಳು ಸೇವಾಕಾರ್ಯಗಳು ವಿಶೇಷ ಸಮಾವೇಶಗಳು ಮಧ್ಯಾಹ್ನದ ಅವಧಿಗಳಲ್ಲಿ, ಪ್ರಾರ್ಥನೆ ಮತ್ತು ಆರಾಧನೆ ಸಮಯದಲ್ಲಿ ಪ್ರತಿವಾರದ ದಿನ ಮಧ್ಯಾಹ್ನ 2 ರಿಂದ 5ರವರೆಗೆ ಭಾಗವಹಿಸಬೇಕು. ಮಧ್ಯಾಹ್ನದ ತರಗತಿಗಳು ದಿನದ ವಿದ್ಯಾರ್ಥಿಗಳಿಗೆ (ವಸತಿ ಬಯಸದ) ಐಚ್ಛಿಕ ವಿಷಯವಾಗಿದೆ. ಎಲ್ಲಾ ವಿದ್ಯಾರ್ಥಿಗಳು ವಾರಾಂತ್ಯದ ದಿನದಲ್ಲಿ ಒಂದು ಅಥವಾ ಅನೇಕ ಸ್ಥಳೀಯ ಸಭೆಗಳಲ್ಲಿ ಸೇವೆ ಮಾಡಲು ಪ್ರೋತ್ಸಾಹಿಸಲಾಗುತ್ತದೆ.

ಸತ್ಯವೇದ ಶಾಲೆ, ಕೊಡಲ್ಪಡುವಂತಹ ವಿವಿಧ ಕಾರ್ಯಕ್ರಮಗಳು, ಕಲಿಕಾ ವಿಷಯಾಂಶಗಳು ಮತ್ತು ಅರ್ಜಿಯನ್ನು ಡೌನ್‌ಲೋಡ್ ಮಾಡಲು apcwo.org/biblecollege ಅನ್ನು ಸಂಪರ್ಕಿಸಿ.

APC-BC is accredited by the
Nations Association for Theological
Accreditation (NATA).

ಹರಟೆ ಮಾತು, ಹಿಂದೆ ದೂರುವುದು, ಚಾಡಿ ಹೇಳುವುದು ಮತ್ತು ಹಿಂದೆ-ತಿವಿಯುವುದು ಮುಂತಾದ ವಿಷಯಗಳನ್ನು ಜನರು ವ್ಯಕ್ತಿಗಳ, ಸಮುದಾಯಗಳ, ಕೆಲಸ ಪರಿಸರಗಳು ಮತ್ತು ಸಾಮಾಜಿಕ ರಚನೆಯ ಮೇಲೆ ಇವು ಹೊಂದಿರುವ ನಕಾರಾತ್ಮಕ ಪರಿಣಾಮಗಳನ್ನು ಅರಿತುಕೊಳ್ಳದೇ ಜನರು ಇಂತಹ ವಿಷಯಗಳಲ್ಲಿ ಸಾಮಾನ್ಯವಾಗಿ ತೊಡಗಿಸಿಕೊಳ್ಳುತ್ತಾರೆ. ಚಿಕ್ಕ ವಿಷಯವೆಂಬುದಾಗಿ ಕರೆಯುವ ಹರಟೆ ಮಾತಿನಿಂದ ಜನರು ಗಾಯಗೊಂಡಿದ್ದಾರೆ, ಸಮುದಾಯಗಳು ವಿಭಜನೆಯಾಗಿವೆ, ಕೆಲಸದ ಪರಿಸರವು ಅನುತ್ಪಾದಕ ಮತ್ತು ಪ್ರತಿಕೂಲವಾಗಿ ಕಂಡು ಬರುತ್ತದೆ. ಹರಟೆಯು ಬೆಳೆಯುವ ಒಂದು ಕಳೆಯಂತಿದೆ ಮತ್ತು ವೇಗನೆ ಅದನ್ನು ಕಿತ್ತು ಹಾಕದಿದ್ದರೆ ಅದು ಒಂದು ಸುಂದರವಾದ ತೋಟವನ್ನು ನಾಶ ಮಾಡುತ್ತದೆ. ಈ ಸರಳ ಪುಸ್ತಕವು ಪವಿತ್ರ ಗ್ರಂಥದಿಂದ ಹರಟೆಯ ಮೇಲೆ ನಮಗೆ ಜಾಗೃತಿ ಮೂಡಿಸಲು, ಇಂತಹ ಜೀವನ ಶೈಲಿಯಿಂದ ಹೊರಬರಲು ಸಹಾಯ ಮಾಡುವುದು ಹಾಗೆಯೇ ನಿಭಾಯಿಸಲು ಸುಲಭ ಪ್ರಾಯೋಗಿಕ ಹಂತಗಳನ್ನು ಪ್ರಸ್ತುತ ಪಡಿಸುವುದಾಗಿದೆ. ಸಂಘಸಂಸ್ಥೆಗಳು ಆರೋಗ್ಯಕರ ಕೆಲಸ ಸ್ಥಳದ ಪರಿಸರಗಳನ್ನು ಬೆಳೆಸಲು; ವಿದ್ಯಾಭ್ಯಾಸ ಸಂಸ್ಥೆಗಳು ಸ್ನೇಹಿ ಆವರಣ ಮತ್ತು ವಿದ್ಯಾರ್ಥಿ ಸಂಬಂಧಗಳಲ್ಲಿ ಬೆಂಬಲವನ್ನು; ಮತ್ತು ಸಮುದಾಯದಲ್ಲಿನ ಜನರು-ಒಬ್ಬರಿಗೊಬ್ಬರಿಗಾಗಿ ಕಾಳಜಿ ಮತ್ತು ಪ್ರೀತಿಯ ಕ್ರಿಯೆಯಲ್ಲಿ ತೊಡಗಿಸಿಕೊಳ್ಳಲೂ ಈ ಪುಸ್ತಕದ ಸಂಪನ್ಮೂಲಗಳು ಸಹಾಯ ಮಾಡುತ್ತದೆಂದು ನಾವು ನಿರೀಕ್ಷಿಸಿದ್ದೇವೆ.

ಹರಟೆಯು ನಿಲ್ಲಲಿ!

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org